KACD410024082021

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 23 ನೇ ಮಾರ್ಚ್, 2026**

**ಆರ್.ಎ. ಸಂಖ್ಯೆ-26/2021**

ಮೇಲ್ಮನವಿದಾರರುಃ ನರಸಿಂಹಪ್ಪ ಬಿನ್ ಲೇಟ್ ಹುಚ್ಚಪ್ಪ,
ವಯಸ್ಸುಃ ಸುಮಾರು 62 ವರ್ಷ,
ಉದ್ಯೋಗಃ ವ್ಯವಸಾಯಗಾರರು,
ವಾಸಃ ಕುರುಬರ ಬೀದಿ,
ಬೆಂಡಮ್ಮ ದೇವಸ್ಥಾನದ ಎದುರುಗಡೆ,
ಹೊಳಲ್ಕೆರೆ ಟೌನ್.

(ಪ್ರತಿನಿಧಿಸುವವರುಃ ಶ್ರೀ ಬಿ.ಎನ್. ಪ್ರಶಾಂತ ಕುಮಾರ್, ನ್ಯಾಯವಾದಿಗಳು)

**-ವಿರುದ್ಧ-**

ಎದುರುದಾರರುಃ 1. ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ರಾಮಪ್ಪ,
ವಯಸ್ಕರು,

2. ನಾಗಪ್ಪ ಬಿನ್ ಲೇಟ್ ರಾಮಪ್ಪ,
ವಯಸ್ಕರು,

3. ಅಡಿವೆಪ್ಪ ಬಿನ್ ಲೇಟ್ ರಾಮಪ್ಪ,
ವಯಸ್ಕರು,
4. ಮಂಜಪ್ಪ ಬಿನ್ ಲೇಟ್ ರಾಮಪ್ಪ,
ವಯಸ್ಕರು,
5. ಕೃಷ್ಣಮೂರ್ತಿ ಬಿನ್ ಲೇಟ್ ರಾಮಪ್ಪ,
ವಯಸ್ಕರು,
6. ಪಾಂಡುರಂಗ ಬಿನ್ ಲೇಟ್ ರಾಮಪ್ಪ,
ವಯಸ್ಕರು,
7. ಶ್ರೀಮತಿ ಪುಟ್ಟಮ್ಮ ಕೋಂ ಲೇಟ್ ರುದ್ರಪ್ಪ,
ವಯಸ್ಕರು,
8. ಲಕ್ಷ್ಮಣ ಬಿನ್ ಲೇಟ್ ರುದ್ರಪ್ಪ,
ವಯಸ್ಸುಃ ಸುಮಾರು 46 ವರ್ಷ,
9. ರಂಗಪ್ಪ ಬಿನ್ ಲೇಟ್ ರುದ್ರಪ್ಪ,
ವಯಸ್ಸುಃ ಸುಮಾರು 43 ವರ್ಷ,
10. ಸ್ವಾಮಿ ಬಿನ್ ಲೇಟ್ ರುದ್ರಪ್ಪ,
ವಯಸ್ಸುಃ ಸುಮಾರು 34 ವರ್ಷ,
11. ರಘು ಬಿನ್ ಲೇಟ್ ರುದ್ರಪ್ಪ,
ವಯಸ್ಸುಃ ಸುಮಾರು 32 ವರ್ಷ,
12. ಶ್ರೀಮತಿ ರತ್ನಮ್ಮ ಕೋಂ ಲೇಟ್ ಅಂಜಿನಪ್ಪ,
ವಯಸ್ಕರು,
13. ಬಸವರಾಜ ಬಿನ್ ಲೇಟ್ ಅಂಜಿನಪ್ಪ,
ವಯಸ್ಸುಃ ಸುಮಾರು 38 ವರ್ಷ,
14. ರಂಗಸ್ವಾಮಿ ಬಿನ್ ಲೇಟ್ ಅಂಜಿನಪ್ಪ,
ವಯಸ್ಸುಃ ಸುಮಾರು 42 ವರ್ಷ,
15. ಶ್ರೀಮತಿ ಪಾರಮ್ಮ ಕೋಂ ಲೇಟ್ ಅನಂತಪ್ಪ,
ವಯಸ್ಕರು,

16. ಸಂತೋಷ ಬಿನ್ ಲೇಟ್ ಅನಂತಪ್ಪ,
ವಯಸ್ಸುಃ ಸುಮಾರು 32 ವರ್ಷ,

ಎಲ್ಲರೂ ವ್ಯವಸಾಯಗಾರರು ಮತ್ತು
ವಾಸಃ ಕುರುಬರ ಬೀದಿ,
ಕೆಂಡಮ್ಮ ದೇವಸ್ಥಾನದ ಎದುರುಗಡೆ,
ಹೊಳಲ್ಕೆರೆ ಟೌನ್.

(ಪ್ರತಿನಿಧಿಸುವವರುಃ ಶ್ರೀ ಎನ್.ಹೆಚ್. ಶಾಂತವೀರಪ್ಪ, ನ್ಯಾಯವಾದಿಗಳು)

| | | | | |
|---|---|---|---|---|
| 1 | ಮೇಲ್ಮನವಿ ದಾಖಲಿಸಿದ ದಿನಾಂಕ | 02.12.2021 | | |
| 2 | ಮೇಲ್ಮನವಿ ಸ್ವರೂಪ | ವಿಚಾರಣಾ ನ್ಯಾಯಾಲಯವಾದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳಲ್ಕೆರೆಯ ಅಸಲು ದಾವಾ ಸಂಖ್ಯೆ-137/2015 ರ ದಿನಾಂಕ 01.10.2021 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಮೇಲ್ಮನವಿ | | |
| 3 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 23.03.2026 | | |
| 4 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 04 | 03 | 02 |

*****

**-:: ತೀರ್ಪು ::-**

ಈ ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದಲ್ಲಿ ವಾದಿಯಾಗಿದ್ದು, ಪ್ರಸ್ತುತ ಈ ಮೇಲ್ಮನವಿಯನ್ನು ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿನ ಅಸಲು ದಾವಾ ಸಂಖ್ಯೆ-137/2015 ರ ದಿನಾಂಕ 01.10.2021 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಈ ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

2. ಪಕ್ಷಗಾರರು ವಿಚಾರಣಾ ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕ ದಲ್ಲಿದ್ದರೋ, ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ಶ್ರೇಯಾಂಕದಲ್ಲಿ ಸದರಿರವರನ್ನು ಉಲ್ಲೇಖಿಸಲಾಗುತ್ತದೆ.

3. ವಾದಿಯು ಸಲ್ಲಿಸಿರುವ ವಾದಪತ್ರದಲ್ಲಿನ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ವಾದಿಯು ದಾವಾ ಅನುಸೂಚಿತ ಸ್ವತ್ತಿನ ಮಾಲೀಕರಾಗಿದ್ದು, ಯಾವುದೇ ಅಡಚಣೆ ಇಲ್ಲದೆ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತು ಮೂಲತಃ ವಾದಿಯ ತಂದೆಯಾದ ಮೃತ ಹುಚ್ಚಪ್ಪ ಬಿನ್ ಅಡಿವೆಪ್ಪರವರಿಗೆ ಸೇರಿತ್ತು. ದಾವಾ ಅನುಸೂಚಿತ ಸ್ವತ್ತನ್ನು ದಿನಾಂಕ 24.07.1979 ರ ನೋಂದಣಿ ವಿಭಾಗ ಪತ್ರದಂತೆ ಒಟ್ಟು ಕುಟುಂಬದ ಸ್ವತ್ತುಗಳ ಕುರಿತಾಗಿ ಹುಚ್ಚಪ್ಪ ಮತ್ತು ಆತನ ಸಹೋದರರಾದ ಮೃತ ರಾಮಪ್ಪ ಬಿನ್ ಅಡಿವೆಪ್ಪರವರ ನಡುವೆ ಏರ್ಪಟ್ಟಂತಹ ಒಂದೇ ಪಾಲು ವಿಭಜನೆ ವಿಭಾಗದಂತೆ ಅರ್ಜಿಸಿದ್ದರು. ಸದರಿ ವಿಭಾಗ ಪತ್ರದ ನಂತರದಲ್ಲಿ ಹುಚ್ಚಪ್ಪರವರು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿದ್ದು, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಗಳು ಸದರಿರವರ ಹೆಸರಿಗೆ ಏರ್ಪಟ್ಟಿದ್ದವು. ಮೃತ ಹುಚ್ಚಪ್ಪರವರು ಒಟ್ಟು ಕುಟುಂಬದಲ್ಲಿ ಏರ್ಪಟ್ಟಂತಹ ವಿಭಾಗದ ಸಮಯದಲ್ಲಿ ಒಟ್ಟು ಕುಟುಂಬದ ಸ್ವತ್ತುಗಳ ಕುರಿತಾಗಿ ಕಡಿಮೆ ಹಿಸ್ಸೆಯನ್ನು ಪಡೆದುಕೊಂಡಿದ್ದು, ಆತನ ಸಹೋದರನ ಕುಟುಂಬ ದೊಡ್ಡದಾಗಿದ್ದ ಕಾರಣ, ಹೆಚ್ಚಿನ ಸ್ವತ್ತನ್ನು ಪಡೆದಿದ್ದರು. ವಾದಿಯ ತಂದೆಯಾದ ಹುಚ್ಚಪ್ಪರವರು 1983 ರಲ್ಲಿ ಮೃತಪಟ್ಟಿದ್ದು, ಸದರಿರವರ ಮರಣಾನಂತರದಲ್ಲಿ ವಾದಿಯ ತಾಯಿಯಾದ ಶ್ರೀಮತಿ

ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರಿಗೆ ದಾವಾ ಸ್ವತ್ತಿನ ಖಾತೆಯು ಏರ್ಪಟ್ಟಿತ್ತು. ವಾದಿಯ ತಾಯಿ ಮತ್ತು ವಾದಿ ಸದರಿ ಸ್ವತ್ತಿನ ಕುರಿತಾಗಿ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿದ್ದರು. ವಾದಿಯ ತಾಯಿಯಾದ ಲಕ್ಕಮ್ಮರವರು 2002 ನೇ ಸಾಲಿನಲ್ಲಿ ಮೃತಪಟ್ಟಿದ್ದು, ಆ ನಂತರದಲ್ಲೂ ಸಹ ದಾವಾ ಸ್ವತ್ತಿನ ಖಾತೆಯು ವಾದಿಯ ತಾಯಿಯ ಹೆಸರಿನಲ್ಲಿಯೆ ಮುಂದುವರೆದಿತ್ತು. ವಾದಿಯು ದಾವಾ ಸ್ವತ್ತಿನ ಕುರಿತಾಗಿ ತನ್ನ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಳ್ಳುವ ಕುರಿತು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆದಾಗ್ಯೂ ವಾದಿಯು ದಾವಾ ಸ್ವತ್ತಿನ ಕುರಿತಾಗಿ ಯಾವುದೇ ತಕರಾರು ಇಲ್ಲದೆ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿದ್ದರು. ಪ್ರತಿವಾದಿಯರು ವಾದಿಗೆ ಹತ್ತಿರದ ಸಂಬಂಧಿಕರಾಗಿದ್ದು, ಸದರಿರವರು ವಾದಿಯ ಚಿಕ್ಕಪ್ಪನಾದ ರಾಮಪ್ಪ ಬಿನ್ ಹುಚ್ಚಪ್ಪರವರ ಪತ್ನಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳಾಗಿರುತ್ತಾರೆ. 5 ನೇ ಪ್ರತಿವಾದಿಯಾದ ಕೃಷ್ಣಮೂರ್ತಿ ಬಿನ್ ರಾಮಪ್ಪರವರು ಉಪವಿಭಾಗಾಧಿಕಾರಿಗಳು, ಚಿತ್ರದುರ್ಗರವರಲ್ಲಿ 2012 ನೇ ಸಾಲಿನಲ್ಲಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಮೃತ ಹುಚ್ಚಪ್ಪರವರ ಹೆಸರಿನಲ್ಲಿ ಖಾತೆ ನಮೂದಾಗಿರುವುದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯು ಆರ್.ಎ. ಸಂಖ್ಯೆ-38/2012-13 ರಂತೆ ನಮೂದಾಗಿದ್ದು, ವಾದಿಯು ಸದರಿ ಮೇಲ್ಮನವಿ ಪ್ರಕ್ರಿಯೆಯಲ್ಲಿ ಹಾಜರಾಗಿರುವುದಿಲ್ಲ ಮತ್ತು ತನ್ನ ಪರವಾಗಿ ಯಾವುದೇ ತಕರಾರನ್ನು ಸಹ ಸಲ್ಲಿಸಿರುವುದಿಲ್ಲ. ಉಪವಿಭಾಗಾಧಿಕಾರಿಗಳು, ಚಿತ್ರದುರ್ಗರವರು ದಿನಾಂಕ 13.02.2015 ರ ಆದೇಶದಂತೆ ಸದರಿ ಮೇಲ್ಮನವಿಯನ್ನು ಪುರಸ್ಕರಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ತಹಶೀಲ್ದಾರ್, ಹೊಳಲ್ಕೆರೆರವರ ಎಂ.ಆರ್. ಸಂಖ್ಯೆ-42/1979-80 ರ ಆದೇಶವನ್ನು ರದ್ದುಪಡಿಸಿ, ವಾದಿಗೆ ದಿನಾಂಕ 24.09.1979 ರ ನೋಂದಣಿ ಒಂದೇ ಪಾಲು ವಿಭಾಗ ಪತ್ರದ ಕುರಿತಾಗಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಕಂಡುಕೊಳ್ಳುವಂತೆ ನಿರ್ದೇಶಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ಆದೇಶವನ್ನು ಬಳಸಿಕೊಂಡು ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಪಹಣಿಯಲ್ಲಿ

ನಮೂದಾಗಿದ್ದಂತಹ ವಾದಿಯ ತಾಯಿಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರನ್ನು ರದ್ದುಪಡಿಸಿ, ಸದರಿ ಪಹಣಿಯಲ್ಲಿ ಸದರಿರವರ ತಂದೆಯಾದ ರಾಮಪ್ಪರವರ ಹೆಸರನ್ನು ನಮೂದಿಸಿಕೊಂಡಿರುತ್ತಾರೆ. ಈ ಮೇಲ್ಕಂಡ ಅಂಶದ ಕುರಿತಾಗಿ ವಾದಿಗೆ ಇತ್ತೀಚೆಗೆ ತಿಳಿದಿದ್ದು, ಕೂಡಲೆ ಸದರಿ ಆದೇಶದ ಕುರಿತಾಗಿ ಜಿಲ್ಲಾಧಿಕಾರಿಗಳು, ಚಿತ್ರದುರ್ಗರವರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ವಿಚಾರಣೆಗಾಗಿ ಬಾಕಿ ಇರುತ್ತದೆ. ಪ್ರತಿವಾದಿಯರು ಇಷ್ಟು ದಿನಗಳ ಕಾಲ ಸುಮ್ಮನಿದ್ದು, ಏಕಾಏಕಿ ದಿನಾಂಕ 20.07.2015 ರಂದು ದಾವಾ ಅನುಸೂಚಿತ ಸ್ವತ್ತಿನ ಬಳಿ ಬಂದು, ವಾದಿಯ ದಾವಾ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನತೆಗೆ ತಕರಾರು ಮಾಡಿ, ದಾವಾ ಸ್ವತ್ತಿನ ಕುರಿತಾದ ವಾದಿಯ ಮಾಲೀಕತ್ವದ ಹಕ್ಕನ್ನು ಅಲ್ಲಗಳೆದಿರುತ್ತಾರೆ. ವಾದಿಯು ಪ್ರತಿವಾದಿಯರಿಗೆ ದಾವಾ ಸ್ವತ್ತಿನ ಸ್ವಾಧೀನತೆಗೆ ತಕರಾರು ಮಾಡದಂತೆ ನಿವೇದಿಸಿಕೊಂಡಿದ್ದಾಗ್ಯೂ, ಪ್ರತಿವಾದಿಯರು ಸಮಾಜಘಾತುಕ ಶಕ್ತಿಗಳೊಂದಿಗೆ ಸ್ಥಳಕ್ಕೆ ಬಂದು ವಾದಿಯ ಸ್ವಾಧೀನತೆಗೆ ತಕರಾರು ಮಾಡಿರುತ್ತಾರೆ. ಈ ಮೇಲ್ಕಂಡ ಪ್ರತಿವಾದಿಯರ ಕೃತ್ಯವನ್ನು ತಡೆಯುವುದು ಕಷ್ಟಸಾಧ್ಯವಾಗಿರುತ್ತದೆ. ಪ್ರತಿವಾದಿಯರು ವಾದಿಯ ಸ್ವಾಧೀನತೆಯನ್ನು ತಪ್ಪಿಸುವುದಾಗಿ ಬೆದರಿಕೆಯನ್ನು ಒಡ್ಡಿದ್ದು, ಪ್ರತಿವಾದಿಯರು ವಾದಿಯನ್ನು ದಾವಾ ಸ್ವತ್ತಿನಿಂದ ತೆರವುಗೊಳಿಸುವಂತಹ ಸಾಧ್ಯತೆ ಇರುತ್ತದೆ. ಈ ಮೇಲ್ಕಂಡ ಪ್ರತಿವಾದಿಯರ ಕೃತ್ಯವು ಕಾನೂನುಬಾಹಿರವಾಗಿರುತ್ತದೆ. ಆದ್ದರಿಂದ ವಾದಿಯು ಪ್ರತಿವಾದಿಯರ ವಿರುದ್ದ ಘೋಷಣಾತ್ಮಕ ಪರಿಹಾರವನ್ನು ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ಅಂಶಗಳು ಈ ಕೆಳಗಿನಂತಿವೆ:-

ವಾದಿಯು ಸಲ್ಲಿಸಿರುವ ವಾದಪತ್ರದಲ್ಲಿನ ಅಂಶಗಳನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಅಲ್ಲಗಳೆದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ.

ದಾವಾ ಸರ್ವೇ ನಂ.30/3 ರ ಸ್ವತ್ತು ಒಟ್ಟು 10 ಎಕರೆ 30 ಗುಂಟೆ ಇದ್ದು, ಸದರಿ ಸ್ವತ್ತು ಮೂಲತಃ ಹೊಳಲ್ಕೆರೆ ಟೌನಿನ ಚಿಕ್ಕಬಸಪ್ಪ ಬಿನ್ ಜಂಬಿಗೆ ಸಿದ್ದಪ್ಪರವರಿಗೆ ಸೇರಿತ್ತು. 5 ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತನ್ನು ತನ್ನ ಸ್ವಂತ ಆದಾಯದಿಂದ ಸ್ವತಂತ್ರವಾಗಿ ಖರೀದಿಸಿರುತ್ತಾರೆ. ದಿನಾಂಕ 28.10.1954 ರಂದು ನೋಂದಣಿ ಕ್ರಯ ಪತ್ರದಂತೆ ಸರ್ವೇ ನಂ.30/3 ರ 10 ಎಕರೆ 30 ಗುಂಟೆ ಸ್ವತ್ತನ್ನು ಚಿಕ್ಕಬಸಪ್ಪ ಬಿನ್ ಜಂಬಿಗೆ ಸಿದ್ದಪ್ಪರವರಿಂದ ಖರೀದಿಸಿರುತ್ತಾರೆ. ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನಾಂಕದಿಂದ 5 ನೇ ಪ್ರತಿವಾದಿಯ ತಂದೆ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ದಾವಾ ಸ್ವತ್ತಿನ ಕುರಿತಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಹೊಳಲ್ಕೆರೆ ಗ್ರಾಮದ ಸರ್ವೇ ನಂ.30/3 ರ ಕುರಿತಾಗಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಪತ್ನಿ ಮತ್ತು ಮಕ್ಕಳನ್ನು ಹೊರತುಪಡಿಸಿ, ಇತರೆ ಯಾರಿಗೂ ಸಹ ಹಕ್ಕು, ಅಧಿಕಾರ, ಹಿತಾಸಕ್ತಿ ಇರುವುದಿಲ್ಲ. ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ಅಡಿವೆಪ್ಪರವರ ನೋಂದಣಿ ಅಧಿಕಾರಿಗಳೊಂದಿಗೆ ಮತ್ತು 5 ನೇ ಪ್ರತಿವಾದಿಯ ತಂದೆಯ ಶತ್ರುಗಳೊಂದಿಗೆ ಸೇರಿಕೊಂಡು ಹಕ್ಕು ಪರಿತ್ಯಜನ ಪತ್ರ ಯಾನೆ ಒಂದೇ ಪಾಲು ವಿಭಜನೆ ದಾಖಲಾತಿಯನ್ನು ಸೃಷ್ಟಿಸಿಕೊಂಡಿರುತ್ತಾರೆ. ವಾದಿಯ ತಂದೆಯಾದ ಹುಚ್ಚಪ್ಪ ಮತ್ತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರು ಮೃತ ಅಡಿವೆಪ್ಪರವರ ಮಕ್ಕಳಾಗಿದ್ದು, ಆದಾಗ್ಯೂ ತಾಯಿಯರು ಬೇರೆ ಬೇರೆ ಆಗಿರುತ್ತಾರೆ. 1945 ರಲ್ಲಿ ವಾದಿಯ ತಂದೆಯಾದ ಹುಚ್ಚಪ್ಪ ಮತ್ತು ಪ್ರತಿವಾದಿಯರ ತಂದೆಯಾದ ರಾಮಪ್ಪರವರು ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತವಾದ ಸಂಪೂರ್ಣ ಸ್ವತ್ತುಗಳನ್ನು ಮಾರಾಟ ಮಾಡಿದ್ದು, ಆ ನಂತರದಲ್ಲಿ ಇಬ್ಬರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಒಟ್ಟು ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡಿದ ನಂತರದಲ್ಲಿ ಯಾವುದೇ ಸ್ವತ್ತುಗಳು ಇರಲಿಲ್ಲ. ಕೆಲವು ವರ್ಷಗಳ ನಂತರದಲ್ಲಿ 5 ನೇ ಪ್ರತಿವಾದಿಯ ತಂದೆಯು ಸರ್ಕಾರಿ ನೌಕರಿಯಲ್ಲಿ ಅರಣ್ಯ ರಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಉದ್ಯೋಗದಿಂದ ಬಂದಂತಹ ಆದಾಯದಿಂದ 1954 ನೇ ಸಾಲಿನಲ್ಲಿ ದಾವಾ ಅನುಸೂಚಿತ ಸ್ವತ್ತನ್ನು ಕ್ರಯಕ್ಕೆ

ಪಡೆದಿದ್ದು, ಹಾಗಾಗಿ ಸದರಿ ಸ್ವತ್ತು ಸದರಿರವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಪ್ರತಿವಾದಿಯರ ತಂದೆಯು ದಾವಾ ಅನುಸೂಚಿತ ಸ್ವತ್ತನ್ನು ಕಬಳಿಸಲು ದಾಖಲಾತಿಗಳನ್ನು ಕಾನೂನುಬಾಹಿರವಾಗಿ ಸೃಷ್ಟಿಸಿಕೊಂಡಿರುತ್ತಾರೆ. ಸದರಿ ದಾಖಲಾತಿಗಳು ಪ್ರತಿವಾದಿಯರ ಹಕ್ಕಿಗೆ ಬಂಧನಕಾರಿಯಾಗುವುದಿಲ್ಲ. ದಿನಾಂಕ 28.10.1954 ರ ನೋಂದಣಿ ಕ್ರಯ ಪತ್ರದ ದಿನಾಂಕದಿಂದ ಪ್ರತಿವಾದಿಯರು ಯಾವುದೇ ತಕರಾರು ಇಲ್ಲದೆ ಇಂದಿನವರೆಗೂ ಸಹ ದಾವಾ ಸ್ವತ್ತಿನ ಕುರಿತಾಗಿ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ವಾದಿಯ ತಾಯಿಯಾದ ಲಕ್ಕಮ್ಮರವರ ಮರಣಾನಂತರದಲ್ಲಿ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ನೀಡುವಂತೆ ಕೇಳಿದ್ದು, ಪ್ರತಿವಾದಿಯರು ನಿರಾಕರಿಸಿರುತ್ತಾರೆ. ಪ್ರತಿವಾದಿಯರು ವಾದಿಗೆ ಸರ್ವೆ ನಂ.30/3 ಸಂಪೂರ್ಣ 10 ಎಕರೆ 30 ಗುಂಟೆ ಸ್ವತ್ತು 5 ನೇ ಪ್ರತಿವಾದಿಯ ತಂದೆಯ ಸ್ವಯಾರ್ಜಿತ ಸ್ವತ್ತಾಗಿದ್ದು, ಒಟ್ಟು ಕುಟುಂಬಕ್ಕೆ ಸೇರಿದಂತಹ ಪಿತ್ರಾರ್ಜಿತವಾದ ಮತ್ತು ಒಟ್ಟು ಕುಟುಂಬದ ಸ್ವತ್ತನ್ನು ನಿಮ್ಮ ತಂದೆ ಈಗಾಗಲೇ 1945 ರಲ್ಲಿಯೆ ಮಾರಾಟ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಆದಾಗ್ಯೂ ದಾವಾ ಅನುಸೂಚಿತ ಸ್ವತ್ತು ಪ್ರತಿವಾದಿಯರಿಗೆ ಸೇರಿದಂತಹ ಸ್ವತ್ತು ಎಂಬುದು ತಿಳಿದಿದ್ದರು ಸಹ ವಾದಿಯ ತಂದೆಯು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಆ ನಂತರದಲ್ಲಿ ಪ್ರತಿವಾದಿಯರು ಕಂದಾಯ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿಯರಿಗೆ ಕಾನೂನುಬಾಹಿರವಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುವುದು ತಿಳಿದು ಬಂದಿರುತ್ತದೆ. ಆ ನಂತರದಲ್ಲಿ ಪ್ರತಿವಾದಿಯರು ಸಂಬಂಧಪಟ್ಟ ಪ್ರಾಧಿಕಾರದಲ್ಲಿ ತಕರಾರನ್ನು ಸಲ್ಲಿಸಿದ್ದು, ಹಾಗಾಗಿ ಕಂದಾಯ ದಾಖಲಾತಿಗಳಲ್ಲಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ಲೇಟ್ ಅಡಿವೆಪ್ಪರವರ ಹೆಸರನ್ನು ದಿನಾಂಕ 28.10.1954 ರ ನೋಂದಣಿ ಕ್ರಯ ಪತ್ರದ ಆಧಾರದಲ್ಲಿ ಉಲ್ಲೇಖ ಮಾಡಿರುತ್ತಾರೆ. ವಾದಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಅಥವಾ ದಾವಾ ಸರ್ವೆ ನಂಬರಿನ ಕುರಿತಾಗಿ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಇರುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿರುವ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ಈ ಮೇಲ್ಕಂಡ ವಾದ-ಪ್ರತಿವಾದ ಪತ್ರವನ್ನು ಪರಿಶೀಲಿಸಿ, ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ದಿನಾಂಕ 18.08.2016 ರಂದು ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಿರುತ್ತಾರೆಃ-

1. Whether the Plaintiff proves his ownership over the suit schedule property?
2. Whether the defendants prove that in the year 1945 their father Ramappa and plaintiff's father Hucchappa have already sold their entire ancestral and joint family properties and father of defendant No.5 has purchased suit scheduled property in the year 1954?
3. Whether the plaintiff proves that he is in enjoyment of suit schedule property as on the date filing of the suit?
4. Whether the Plaintiff proves the alleged interference of the defendants?
5. Whether the suit is properly valued and paid correct court fee?
6. Whether the Plaintiff is entitled for the relief as sought for?
7. What Order or Decree?

6. ಈ ಮೇಲ್ಕಂಡ ವಿವಾದಾಂಶಗಳನ್ನು ರುಜುವಾತುಪಡಿಸಲು ವಾದಿಯು ಪ್ರಾರಂಭಿಕ ಹಂತದಲ್ಲಿ ತನ್ನನ್ನು ತಾನು ಪಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಬಿ. ಚಂದ್ರಪ್ಪ ಬಿನ್ ಬೈರಪ್ಪರವರನ್ನು ಪಿ.ಡಬ್ಲೂ-2 ಎಂದು ಸಾಕ್ಷ್ಯ ಮಾಡಿಸಿದ್ದು, ನಿಪಿ-1 ರಿಂದ 11 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ 5 ನೇ

ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 32 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ವಿಚಾರಣಾ ನ್ಯಾಯಾಲಯವು ವಾದ-ಪ್ರತಿವಾದ ಪತ್ರ ಮತ್ತು ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿ, ವಿವಾದಾಂಶ ಸಂಖ್ಯೆ-1, 3 ರಿಂದ 6 ನ್ನು ನಕಾರಾತ್ಮಕವೆಂದು ಮತ್ತು ವಿವಾದಾಂಶ ಸಂಖ್ಯೆ-2 ನ್ನು ಸಕಾರಾತ್ಮಕವೆಂದು ನಿರ್ಣಯಿಸಿ, ವಾದಿಯು ಸಲ್ಲಿಸಿರುವಂತಹ ದಾವೆಯನ್ನು ವಜಾ ಮಾಡಿರುತ್ತದೆ.

7. ಈ ಮೇಲ್ಕಂಡ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ವಾದಿಯು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಈ ಮೇಲ್ಮನವಿಯಲ್ಲಿ ವಾದಿ / ಮೇಲ್ಮನವಿ ದಾರರು ಈ ಕೆಳಕಂಡ ಸಂಗತಿಗಳು ಹಾಗೂ ನಿಲುವುಗಳನ್ನು ತೆಗೆದುಕೊಂಡಿದ್ದು, ಸದರಿ ನಿಲುವುಗಳು ಈ ಕೆಳಗಿನಂತಿವೆ:-

ಮೇಲ್ಮನವಿದಾರರಾದ ವಾದಿಯು ಎದುರುದಾರರಾದ ಪ್ರತಿವಾದಿಯರ ವಿರುದ್ಧ ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಅಸಲು ದಾವಾ ಸಂಖ್ಯೆ-137/2015 ರಂತೆ ದಾವೆಯನ್ನು ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯವು ಈ ಮೇಲ್ಕಂಡ ದಾವೆಯಲ್ಲಿ ಉಭಯ ಪಕ್ಷಗಾರರ ವಿಚಾರಣೆಯ ನಂತರದಲ್ಲಿ ದಿನಾಂಕ 01.10.2021 ರಂದು ವಾದಿಯು ಸಲ್ಲಿಸಿರುವ ದಾವೆಯನ್ನು ವಜಾ ಮಾಡಿರುತ್ತದೆ. ಈ ಮೇಲ್ಕಂಡ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಕಾನೂನಿನ ಅಡಿಯಲ್ಲಾಗಲಿ ಅಥವಾ ವಾಸ್ತವಾಂಶದ ಅಡಿಯಲ್ಲಾಗಲಿ ಊರ್ಜಿತವಾಗುವುದಿಲ್ಲ. ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಸ್ಥಾಪಿತ ಕಾನೂನಿನ ಅಂಶಗಳಿಗೆ ವ್ಯತಿರಿಕ್ತವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ವಾದಿಯ ಪರವಾದ ಮೌಖಿಕ ಮತ್ತು ದಾಖಲಾತಿ

ಸಾಕ್ಷ್ಯವನ್ನು ಪರಿಶೀಲಿಸದೆಯೆ, ವಾದಿಯು ಸಲ್ಲಿಸಿರುವ ದಾವೆಯನ್ನು ವಜಾ ಮಾಡಿರುತ್ತದೆ. ವಿಚಾರಣಾ ನ್ಯಾಯಾಲಯವು ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವಂತಹ ಅಂಶಗಳನ್ನು ಪರಾಮರ್ಶಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಪುಟ 15 ಖಂಡಿಕೆ 17 ರಲ್ಲಿ ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, “It is true to suggest that the schedule property was fallen to the plaintiff’s father share in the year 1979 and we are not in possession and enjoyment” ಉಲ್ಲೇಖಿಸಿರುವುದನ್ನು ಅಂಗೀಕರಿಸುವಲ್ಲಿ ವಿಫಲವಾಗಿರುತ್ತದೆ. ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ಒಟ್ಟು ಕುಟುಂಬದ ಸ್ವತ್ತುಗಳನ್ನು ಡಿ.ಡಬ್ಲೂ-1 ರವರ ತಂದೆಯಾದ ರಾಮಪ್ಪರವರ ವಿವಾಹದ ಸಲುವಾಗಿ ರಾಮಪ್ಪ ಮತ್ತು ಹುಚ್ಚಪ್ಪರವರು ಮಾರಾಟ ಮಾಡಿದ್ದರು ಎಂಬುದನ್ನು ಒಪ್ಪಿಕೊಂಡಿದ್ದು, ಸದರಿ ಅಂಶವನ್ನು ಪರಿಗಣಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ದಾವಾ ಅನುಸೂಚಿತ ಸ್ವತ್ತು ವಿಭಾಗದಲ್ಲಿ ಹುಚ್ಚಪ್ಪರವರ ಹಿಸ್ಸೆಗೆ ಬಂದಿತ್ತು ಎಂಬುದನ್ನು ಹಾಗೂ ಆ ಪ್ರಕಾರವಾಗಿ ಕಂದಾಯ ದಾಖಲಾತಿಗಳು ಏರ್ಪಟ್ಟಿದ್ದವು ಎಂಬುದನ್ನು ಒಪ್ಪಿಕೊಂಡಿದ್ದು, ಅಂತೆಯೆ ದಾವಾ ಸ್ವತ್ತಿನ ಕುರಿತಾಗಿ ಕಂದಾಯ ದಾಖಲಾತಿಗಳಲ್ಲಿ 2013-14 ನೇ ಸಾಲಿನವರೆಗೆ ಹುಚ್ಚಪ್ಪ ಮತ್ತು ಲಕ್ಕಮ್ಮನವರ ಹೆಸರು ನಮೂದಾಗಿರುವುದನ್ನು ಒಪ್ಪಿಕೊಂಡಿದ್ದು, ಆದಾಗ್ಯೂ ವಿಚಾರಣಾ ನ್ಯಾಯಾಲಯವು ಈ ಮೇಲ್ಕಂಡ ಒಪ್ಪಿತ ಅಂಶಗಳನ್ನು ಅಂಗೀಕರಿಸುವಲ್ಲಿ ವಿಫಲವಾಗಿರುತ್ತದೆ. ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ನಿಪಿ-4 ರ ದಾಖಲಾತಿಯಲ್ಲಿ ಹುಚ್ಚಪ್ಪ ಬಿನ್ ಅಡಿವೆಪ್ಪರವರ ಹೆಸರು ನಮೂದಾಗಿರುವುದನ್ನು, ಸದರಿ ಹುಚ್ಚಪ್ಪರವರ ಮರಣಾನಂತರದಲ್ಲಿ ನಿಪಿ-5 ಮತ್ತು 6 ರ ದಾಖಲಾತಿಗಳಂತೆ ಲಕ್ಕಮ್ಮರವರ ಹೆಸರು ನಮೂದಾಗಿರುವುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದು, ಆದಾಗ್ಯೂ ಸದರಿ ಒಪ್ಪಿತ ಅಂಶಗಳನ್ನು ಅಂಗೀಕರಿಸುವಲ್ಲಿ ವಿಚಾರಣಾ ನ್ಯಾಯಾಲಯವು ವಿಫಲವಾಗಿರುತ್ತದೆ. ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ದಾವಾ ಅನುಸೂಚಿತ ಸ್ವತ್ತು 1979 ರ ವಿಭಾಗದಂತೆ ವಾದಿಯ

ತಂದೆಯ ಹಿಸ್ಸೆಗೆ ಬಂದಿದ್ದು, ತಾನಾಗಲಿ ಅಥವಾ ಇತರೆ ಪ್ರತಿವಾದಿಯರಾಗಲಿ ಸದರಿ ಸ್ವತ್ತಿನ ಕುರಿತು ಸ್ವಾಧೀನತೆಯನ್ನು ಹೊಂದಿಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದು, ಆದಾಗ್ಯೂ ವಿಚಾರಣಾ ನ್ಯಾಯಾಯವು ಈ ಒಪ್ಪಿತ ಅಂಶದ ಕುರಿತು ಸಮರ್ಪಕವಾಗಿ ವಿಮರ್ಶಿಸುವಲ್ಲಿ ವಿಫಲವಾಗಿರುತ್ತದೆ. ಈ ಮೇಲ್ಕಂಡಂತೆ ಡಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿನ ಹೇಳಿಕೆಯ ಪ್ರಕಾರ, ವಾದಿ ಹಾಗೂ ಆತನ ತಂದೆ-ತಾಯಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ನೋಂದಣಿ ವಿಭಾಗ ಪತ್ರದ ಆಧಾರದಲ್ಲಿ ಸ್ವಾಧೀನತೆಯನ್ನು ಹೊಂದಿರುವುದು ಸ್ಪಷ್ಟವಾಗಿ ಕಂಡುಬಂದಿದ್ದು, ಆದಾಗ್ಯೂ ವಿಚಾರಣಾ ನ್ಯಾಯಾಲಯವು ಸದರಿ ಅಂಶವನ್ನು ಪರಿಗಣಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ನೋಂದಣಿ ವಿಭಾಗ ಪತ್ರವು ಏರ್ಪಡಬೇಕಾದಲ್ಲಿ ಇಬ್ಬರು ಪಕ್ಷಗಾರರ ಅಗತ್ಯತೆ ಇದೆ ಎಂದು ತಪ್ಪಾಗಿ ನಿರ್ಣಯಕ್ಕೆ ಬಂದಿರುತ್ತದೆ. ದಿನಾಂಕ 24.09.1979 ರ ನೋಂದಣಿ ವಿಭಾಗ ಪತ್ರದಲ್ಲಿ ಸ್ಪಷ್ಟವಾಗಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರಿಂದ ವಾದಿಯ ತಂದೆ ಆತನ ಹಿಸ್ಸೆಯನ್ನು ಪಡೆದುಕೊಂಡು, ಒಟ್ಟು ಕುಟುಂಬದಿಂದ ಹೊರಗೆ ಹೋಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದಾಗ್ಯೂ ವಿಚಾರಣಾ ನ್ಯಾಯಾಲಯವು ಈ ಅಂಶವನ್ನು ಪರಿಗಣಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯವು ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರದ ಕುರಿತಾಗಿ ಸೂಕ್ತವಾದ ವಿವಾದಾಂಶಗಳನ್ನು ರೂಪಿಸುವಲ್ಲಿ ವಿಫಲವಾಗಿರುತ್ತದೆ. ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಯಾವುದೇ ರೀತಿಯಲ್ಲೂ ಸಹ ಅಂಗೀಕಾರವಾಗಿರುವುದಿಲ್ಲ. ವಿಚಾರಣಾ ನ್ಯಾಯಾಲಯದ ತೀರ್ಪು ವಕ್ರತೆಯಿಂದ ಕೂಡಿದ್ದು, ಕಾನೂನುಬಾಹಿರವಾದ ಅಂಶಗಳಿಂದ ಕೂಡಿದ್ದು, ಮನಸ್ಸಿಗೆ ಬಂದ ಹಾಗೆ ನೀಡಿರುವಂತಹ ಕಾರಣಗಳಿಂದ ಕೂಡಿದ್ದು, ನಿರಂಕುಶವಾದ ಮತ್ತು ಸಮರ್ಥಿಸಲಾಗದಂತಹ ಅಂಶಗಳಿಂದ ಕೂಡಿರುತ್ತದೆ. ಆದ್ದರಿಂದ ವಿಚಾರಣಾ ನ್ಯಾಯಾಲಯದಲ್ಲಿ ವಾದಿ / ಮೇಲ್ಮನವಿ ದಾರರು ಸಲ್ಲಿಸಿರುವಂತಹ ಅಸಲು ದಾವಾ ಸಂಖ್ಯೆ-137/2015 ರ ದಿನಾಂಕ

01.10.2021 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಗೊಳಿಸಿ, ವಾದಿಯು ಸಲ್ಲಿಸಿರುವಂತಹ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

8. ಈ ಮೇಲ್ಮನವಿಯನ್ನು ಸಲ್ಲಿಸಿದ ನಂತರ ಎದುರುದಾರರಿಗೆ ನೋಟೀಸನ್ನು ನೀಡಿದ್ದು, ಎದುರುದಾರರು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. ವಿಚಾರಣಾ ನ್ಯಾಯಾಲಯದ ಕಡತವನ್ನು ತರಿಸಿ, ಉಭಯ ಪಕ್ಷಗಾರರ ಪರ ವಕೀಲರ ವಾದ-ವಿವಾದವನ್ನು ಆಲಿಸಲಾಯಿತು.

9. ಈ ಮೇಲ್ಕಂಡ ಮೇಲ್ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಮೇಲ್ಮನವಿಯನ್ನು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:-

1. ವಿಚಾರಣಾ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ, ವಾದಿಯು ದಾವಾ ಅನುಸೂಚಿತ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂಬುದು ಕಂಡುಬರುತ್ತದೆಯೆ?
2. ವಿಚಾರಣಾ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ, 1945 ರಲ್ಲಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಮತ್ತು ವಾದಿಯ ತಂದೆಯಾದ ಹುಚ್ಚಪ್ಪರವರು ಒಟ್ಟು ಕುಟುಂಬಕ್ಕೆ ಸೇರಿದ ಸಂಪೂರ್ಣ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡಿದ್ದರು ಹಾಗೂ ಆ ನಂತರದಲ್ಲಿ 5 ನೇ ಪ್ರತಿವಾದಿಯ ತಂದೆ ದಾವಾ ಅನುಸೂಚಿತ ಸ್ವತ್ತನ್ನು 1954 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂಬುದು ಕಂಡುಬರುತ್ತದೆಯೆ?
3. ವಿಚಾರಣಾ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ, ವಾದಿಯು ದಾವೆಯನ್ನು ಸಲ್ಲಿಸುವ ದಿನಾಂಕದಂದು ದಾವಾ ಅನುಸೂಚಿತ ಸ್ವತ್ತಿನ ಕಾನೂನುಬದ್ಧ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ ಎಂಬುದು ಕಂಡುಬರುತ್ತದೆಯೆ?

4. ವಿಚಾರಣಾ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ, ಪ್ರತಿವಾದಿಯರು ವಾದಿಯ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ತಕರಾರು ಮಾಡಿರುತ್ತಾರೆ ಎಂಬುದು ಕಂಡು ಬರುತ್ತದೆಯೆ?

5. ವಿಚಾರಣಾ ನ್ಯಾಯಾಲಯವು ದಿನಾಂಕ 01.10.2021 ರಂದು ಅಸಲು ದಾವಾ ಸಂಖ್ಯೆ-137/2015 ರಲ್ಲಿ ನೀಡಿರುವಂತಹ ತೀರ್ಪು ಮತ್ತು ಡಿಕ್ರಿ ಕಾನೂನುಬದ್ಧವಾಗಿಲ್ಲ ಎಂಬುದನ್ನು ಮೇಲ್ಮನವಿದಾರರು ರುಜುವಾತುಪಡಿಸುವರೆ?

6. ವಿಚಾರಣಾ ನ್ಯಾಯಾಲಯದ ದಿನಾಂಕ 01.10.2021 ರಂದು ಅಸಲು ದಾವಾ ಸಂಖ್ಯೆ-137/2015 ರ ತೀರ್ಪು ಮತ್ತು ಡಿಕ್ರಿ ಯನ್ನು ರದ್ದುಪಡಿಸಿ, ವಾದಿಯು ಸಲ್ಲಿಸಿರುವಂತಹ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮೇಲ್ಮನವಿದಾರರು ರುಜುವಾತು ಪಡಿಸುವರೆ?

7. ಯಾವ ಆದೇಶ?

10. ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆಃ-

| | | |
|---|---|---|
| ಅಂಶ ಸಂಖ್ಯೆ-1 | : | ನಕಾರಾತ್ಮಕವಾಗಿ, |
| ಅಂಶ ಸಂಖ್ಯೆ-2 | : | ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ-3 | : | ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ-4 | : | ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ-5 | : | ಭಾಗಶಃ ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ-6 | : | ಭಾಗಶಃ ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ-7 | : | ಅಂತಿಮ ಆದೇಶದಂತೆ. |

## <u>ಕಾ ರ ಣ ಗ ಳು</u>

11. **<u>ಅಂಶ ಸಂಖ್ಯೆ-1 ರಿಂದ 6:-</u>** ಈ ಎಲ್ಲಾ ಅಂಶಗಳ ಕುರಿತಾಗಿ ರುಜುವಾತುಪಡಿಸುವಂತಹ ಹೊಣೆಗಾರಿಕೆ ಮೇಲ್ಮನವಿದಾರರದ್ದಾಗಿದ್ದು, ಈ ಕುರಿತು ಪ್ರಾರಂಭಿಕ ಹಂತದಲ್ಲಿ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ಹಾಗೂ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗುತ್ತದೆ. ಪ್ರಸ್ತುತ ಈ ಮೇಲ್ಮನವಿಯಲ್ಲಿ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ವಾದಿಯು ಸಲ್ಲಿಸಿರುವಂತಹ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿರುತ್ತಾರೆ.

12. ಈ ಮೇಲ್ಕಂಡ ಅಂಶಗಳ ಕುರಿತು ವಿಚಾರಣಾ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ, ವಿವಾದಾಂಶ ಸಂಖ್ಯೆ-1, 3 ಮತ್ತು 4 ರ ಕುರಿತು ರುಜುವಾತುಪಡಿಸುವ ಸಲುವಾಗಿ, ವಾದಿಯು ಪ್ರಾರಂಭಿಕ ಹಂತದಲ್ಲಿ ತನ್ನನ್ನು ತಾನು ಪಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಬಿ. ಚಂದ್ರಪ್ಪ ಬಿನ್ ಬೈರಪ್ಪರವರನ್ನು ಪಿ.ಡಬ್ಲೂ-2 ಎಂದು ಸಾಕ್ಷ್ಯ ಮಾಡಿಸಿದ್ದು, ನಿಪಿ-1 ರಿಂದ 11 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ವಿವಾದಾಂಶ ಸಂಖ್ಯೆ-2 ರ ಕುರಿತು ರುಜುವಾತುಪಡಿಸುವ ಸಲುವಾಗಿ, ಕುರಿತಾಗಿ 5 ನೇ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲೂ-1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಡಿ-1 ರಿಂದ 32 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ಉಭಯ ಪಕ್ಷಗಾರರ ಸಾಕ್ಷಿದಾರರ ಪಾಟೀ ಸವಾಲಿನಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

13. ಈ ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆಗಳು ಮತ್ತು ಉಭಯ ಪಕ್ಷಗಾರರ ಪರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಅನುಸೂಚಿತ ಸ್ವತ್ತಿನ

ಕುರಿತು ಘೋಷಣಾತ್ಮಕ ಪರಿಹಾರವನ್ನು ಮತ್ತು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಹಾಗಾಗಿ ವಾದಿಯು ವಿವಾದಾಂಶ ಸಂಖ್ಯೆ-1, 3 ಮತ್ತು 4 ರ ಕುರಿತಾಗಿ ತನ್ನ ಪಾಲಿನ ಹೊಣೆಗಾರಿಕೆ ರುಜುವಾತುಪಡಿಸ ಬೇಕಾಗುತ್ತದೆ. ಅಂತೆಯೆ ಪ್ರತಿವಾದಿಯರು 1945 ರಲ್ಲಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಮತ್ತು ವಾದಿಯ ತಂದೆಯಾದ ಹುಚ್ಚಪ್ಪರವರು ಒಟ್ಟು ಕುಟುಂಬಕ್ಕೆ ಸೇರಿದ ಸಂಪೂರ್ಣ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡಿದ್ದರು ಹಾಗೂ ಆ ನಂತರದಲ್ಲಿ 5 ನೇ ಪ್ರತಿವಾದಿಯ ತಂದೆ ದಾವಾ ಅನುಸೂಚಿತ ಸ್ವತ್ತನ್ನು 1954 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನಿಲುವನ್ನು ತೆಗೆದುಕೊಂಡಿದ್ದು, ಹಾಗಾಗಿ ವಿವಾದಾಂಶ ಸಂಖ್ಯೆ-2 ನ್ನು ರುಜುವಾತು ಪಡಿಸುವಂತಹ ಹೊಣೆಗಾರಿಕೆ ಪ್ರತಿವಾದಿಯರದ್ದಾಗಿರುತ್ತದೆ. ಈ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಿಂದ 103 ರವರೆಗಿನ ಪರಿಕಲ್ಪನೆಗಳನ್ನು ಪರಿಶೀಲಿಸುವ ಅಗತ್ಯತೆ ಇರುತ್ತದೆ. ಸದರಿ ಕಾನೂನಿನ ಪರಿಕಲ್ಪನೆ ಗಳನ್ನು ಪರಿಶೀಲಿಸಿದಾಗ, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಂತೆ ಯಾವುದೇ ಒಂದು ವಾಸ್ತವಾಂಶದ ಅಸ್ತಿತ್ವವನ್ನು ಸಾಬೀತುಪಡಿಸುವಂತಹ ಬಾಧ್ಯತೆಯನ್ನು ಯಾವ ವ್ಯಕ್ತಿಯು ಹೊಂದಿರುತ್ತಾನೋ, ಅಂತಹ ವ್ಯಕ್ತಿಯೇ ಸದರಿ ವಾಸ್ತವಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾನೆಂದು ಸ್ಪಷ್ಟವಾಗಿ ಉಲ್ಲೇಖ ವಿರುತ್ತದೆ. ಅಂತೆಯೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 102 ರಂತೆ ಯಾವುದೇ ಒಂದು ಪ್ರಕರಣದಲ್ಲಿ ಉಭಯ ಪಕ್ಷಗಾರರು ಕೂಡ ಸಾಕ್ಷ್ಯವನ್ನು ಒದಗಿಸದಂತಹ ಸಂದರ್ಭದಲ್ಲಿ, ಸೋಲುವ ವ್ಯಕ್ತಿಯ ಮೇಲೆ ರುಜುವಾತಿನ ಭಾರವಿರುತ್ತದೆ ಎಂದು ಸ್ಪಷ್ಟೀಕರಣಗೊಂಡಿರುತ್ತದೆ. ಅಂತೆಯೇ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 103 ರಂತೆ ಯಾವುದೇ ಒಂದು ವಾಸ್ತವಿಕತೆಯ ಕುರಿತು, ಸಾಬೀತುಪಡಿಸುವಂತಹ ಹೊಣೆಗಾರಿಕೆಯು ಯಾವ ನಿರ್ದಿಷ್ಟ ವ್ಯಕ್ತಿಯ ಮೇಲೆ ಇರುತ್ತದೆಯೋ, ಅಂತಹ ವ್ಯಕ್ತಿ ಸದರಿ ವಾಸ್ತವಿಕತೆಯನ್ನು ಸಾಬೀತುಪಡಿಸಬೇಕೆಂದು ಇದ್ದು, ಒಂದೊಮ್ಮೆ ಯಾವುದೇ ಒಂದು ಕಾನೂನಿನ ಮೂಲಕ ಅಂತಹ ವಾಸ್ತವಾಂಶವನ್ನು ಸಾಬೀತುಪಡಿಸುವ ಅಗತ್ಯತೆ

ಇಲ್ಲವೆಂದು ಹೇಳದ ಹೊರತು ನ್ಯಾಯಾಲಯವು ಅದರ ಅಸ್ತಿತ್ವವನ್ನು ನಂಬಬೇಕೆಂದು ಕೋರುವ ವ್ಯಕ್ತಿಯ ಮೇಲೆಯೇ ಸಾಬೀತುಪಡಿಸುವ ಹೊಣೆಗಾರಿಕೆ ಇರುತ್ತದೆ ಎಂದು ಉಲ್ಲೇಖಿಸಿರುತ್ತದೆ.

14. ಈ ಮೇಲ್ಕಂಡ ಉಭಯ ಪಕ್ಷಗಾರರ ಹೇಳಿಕೆಗಳು ಹಾಗೂ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ಮೇಲ್ಕಂಡಂತೆ ವಿವಾದಾಂಶಗಳ ಕುರಿತಾಗಿ, ವಾದಿಯು ತನ್ನ ಹೇಳಿಕೆಗಳಿಗೆ ಪೂರಕ ವಾಗಿ, ನಿಪಿ-1 ರಿಂದ ನಿಪಿ-11 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಿಪಿ-1 ರಂತೆ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ ವಂಶವೃಕ್ಷವನ್ನು ಹಾಜರುಪಡಿಸಿದ್ದು, ಅದರಂತೆ ತಳವಾರ ಅಡಿವೆಪ್ಪ ಮತ್ತು ತೊಳಸಮ್ಮ ದಂಪತಿಗೆ ರಾಮಪ್ಪ ಮತ್ತು ಹುಚ್ಚಪ್ಪ ಎಂಬ ಮಕ್ಕಳಿದ್ದು, ವಾದಿಯು ಹುಚ್ಚಪ್ಪರವರ ಮಗನಾಗಿದ್ದು, ಪ್ರತಿವಾದಿಯರು ರಾಮಪ್ಪರವರ ವಾರಸುದಾರರಾಗಿರುವುದು ಕಂಡು ಬರುತ್ತದೆ. ಸದರಿ ರಾಮಪ್ಪ ಮತ್ತು ಹುಚ್ಚಪ್ಪರವರು ಮೃತಪಟ್ಟಿರುವುದು ಕಂಡು ಬರುತ್ತದೆ. ಉಭಯ ಪಕ್ಷಗಾರರ ವಾದ ಮತ್ತು ಪ್ರತಿವಾದ ಪತ್ರವನ್ನು ಹಾಗೂ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಕುರಿತು ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ನಿಪಿ-1 ರ ಕುರಿತಾಗಿ ವಾದಿಯ ಪರವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-2 ರಂತೆ ದಿನಾಂಕ 24.09.1979 ರ ಒಂದೇ ಪಾಲು ವಿಭಜನೆಯ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿ ಯಂತೆ ಹೊಳಲ್ಕೆರೆ ಟೌನಿನ ವಾಸಿಯಾದ ತಳವಾರ ಅಡಿವೆಪ್ಪರವರ ಮಗನಾದ ರಾಮಪ್ಪರವರಿಗೆ ಅದೇ ಗ್ರಾಮದ ಖಾಸ ತಮ್ಮನಾದ ಹುಚ್ಚಪ್ಪರವರು ಒಂದೇ ಪಾಲು ವಿಭಜನೆಯ ದಾಖಲಾತಿಯನ್ನು ಜಾರಿಮಾಡಿಕೊಟ್ಟಿದ್ದು, ಸದರಿ ದಾಖಲಾತಿಯಂತೆ ಹುಚ್ಚಪ್ಪರವರು ದಾವಾ ಅನುಸೂಚಿತ ಸ್ವತ್ತಾದ ಹೊಳಲ್ಕೆರೆ ಗ್ರಾಮದ ಸರ್ವೆ ನಂ. 30/3 ರ ಜಮೀನಿನ ಪೈಕಿ ಪಶ್ಚಿಮ ಭಾಗದ ಉತ್ತರ-ದಕ್ಷಿಣ 2 ಎಕರೆ 20 ಗುಂಟೆ ಸ್ವತ್ತನ್ನು ಪೂರ್ವಕ್ಕೆ-ಇದೇ ನಂಬರಿನ ಪೈಕಿ ರಾಮಪ್ಪರವರ ಹಿಸ್ಸೆ, ಪಶ್ಚಿಮಕ್ಕೆ-ಇದೇ

ನಂಬರಿನ ಪೈಕಿ 2 ನೇ ಪೋಡಿನ ಸ್ವತ್ತು, ಉತ್ತರಕ್ಕೆ-ಸರ್ವೇ ನಂ.23 ಮತ್ತು ದಕ್ಷಿಣಕ್ಕೆ-31 ರ ಸ್ವತ್ತು ಎಂಬ ಚಕ್ಕುಬಂದಿಗೊಳಪಟ್ಟಂತೆ ಹುಚ್ಚಪ್ಪರವರ ಹಿಸ್ಸೆಗೆ ಪಡೆದಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ದಾಖಲಾತಿಯಲ್ಲಿ ವಾದಿಯ ತಂದೆಯಾದ ಹುಚ್ಚಪ್ಪರವರ ಮಾತ್ರ ಪಕ್ಷಗಾರರಾಗಿದ್ದು, ಪ್ರತಿವಾದಿಯರ ಕುಟುಂಬದ ಪೂರ್ವಜರಾದ ರಾಮಪ್ಪರವರು ಪಕ್ಷಗಾರರಾಗಿರುವುದಿಲ್ಲ. ಹಾಗಾಗಿ ಈ ಮೇಲ್ಕಂಡ ದಾಖಲಾತಿಯ ಕುರಿತಾಗಿ ವಾದಿಯು ಮಾಲೀಕತ್ವದ ಹಕ್ಕನ್ನು ಅರ್ಜಿಸಿರುತ್ತಾರೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಉಳಿದಂತೆ ಸದರಿ ಸ್ವತ್ತಿನ ಕುರಿತಾಗಿ ಏರ್ಪಟ್ಟಿರುವಂತಹ ಕಂದಾಯ ದಾಖಲಾತಿಗಳ ಆಧಾರದಲ್ಲಿ ಹಾಗೂ ಪ್ರತಿವಾದಿಯರ ಪರ ಮೌಖಿಕ ಸಾಕ್ಷ್ಯದ ಆಧಾರದಲ್ಲಿ ದಿನಾಂಕ 24.07.1979 ರಿಂದ ದಾವೆಯನ್ನು ಸಲ್ಲಿಸುವ ಅವಧಿಯವರೆಗೆ ವಾದಿಯ ತಂದೆ ಆ ನಂತರದಲ್ಲಿ ವಾದಿ ನಿರಂತರತೆಯ ಮತ್ತು ನಿಶ್ಚಿತತೆಯ ಸ್ವಾಧೀನತೆಯನ್ನು ಹೊಂದಿರುವ ಕುರಿತಾಗಿ ಪರಿಗಣಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-3 ರಂತೆ ಹೊಳಲ್ಕೆರೆ ಗ್ರಾಮದ ಎಂ.ಆರ್.ಸಂಖ್ಯೆ-42/1979-80 ರ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಸದರಿ ದಾಖಲಾತಿಯಂತೆ ಎಸ್.ಆರ್.ಸಂಖ್ಯೆ-290/1979-80 ರ ಖುಲಾಸೆ ಪತ್ರದಂತೆ, ರಾಮಪ್ಪ ಬಿನ್ ಅಡಿವೆಪ್ಪ, ಹೊಳಲ್ಕೆರೆರವರಿಂದ ಹುಚ್ಚಪ್ಪ ಬಿನ್ ಅಡಿವೆಪ್ಪ, ಹೊಳಲ್ಕೆರೆರವರಿಗೆ ಸರ್ವೇ ನಂ.30/3 ರ ಪೈಕಿ 2 ಎಕರೆ 20 ಗುಂಟೆ ಸ್ವತ್ತಿನ ಕುರಿತು ಖುಲಾಸೆ ದಾಖಲಾತಿಯ ಆಧಾರದಲ್ಲಿ ಖಾತೆ ಏರ್ಪಟ್ಟಿರುವ ಕುರಿತು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಯ ಕುರಿತು ಪರಿಶೀಲಿಸಲಾಗಿ, 1979-80 ನೇ ಸಾಲಿನಲ್ಲಿ ವಾದಿಯ ತಂದೆಯಾದ ಹುಚ್ಚಪ್ಪರವರ ಹೆಸರಿಗೆ ನಿಪಿ-2 ರ ದಾಖಲಾತಿಯ ಆಧಾರದಲ್ಲಿ ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿ ಏರ್ಪಟ್ಟು 35 ವರ್ಷಗಳ ನಂತರದಲ್ಲಿ ಪ್ರತಿವಾದಿಯರ ಕುಟುಂಬದವರು ಸದರಿ ದಾಖಲಾತಿಯ ಕುರಿತು ರದ್ದುಪಡಿಸುವಂತೆ ಕೋರಿ ಉಪವಿಭಾಗಾಧಿಕಾರಿಗಳು, ಚಿತ್ರದುರ್ಗರವರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಆ

ಪ್ರಕಾರ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿಗೆ ಖಾತೆ ನಮೂದು ಮಾಡುವಂತೆ ಸೂಚಿಸಿದ್ದು, ಆದಾಗ್ಯೂ ವಿಭಾಗ ಪತ್ರದ ನೈಜತೆಯ ಕುರಿತಾಗಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ನಿರ್ದೇಶಿಸಿರುವುದು ನಿಪಿ-11 ರ ದಾಖಲಾತಿಯಂತೆ ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಯ ಕುರಿತು ಪರಿಶೀಲಿಸಲಾಗಿ, ವಾದಿಯ ತಂದೆಯ ಹೆಸರಿಗೆ ಖಾತೆ ಏರ್ಪಟ್ಟ 35 ವರ್ಷಗಳ ನಂತರದಲ್ಲಿ ಪ್ರಶ್ನಿಸಿದ್ದು, ಹಾಗಾಗಿ ವಾದಿಯ ತಂದೆ ಹಾಗೂ ಆ ನಂತರದಲ್ಲಿ ವಾದಿ ದಾವಾ ಸ್ವತ್ತಿನ ಕುರಿತಾಗಿ 35 ವರ್ಷಗಳ ಕಾಲ ಖಾತೆದಾರರಾಗಿದ್ದರು ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-4 ರಿಂದ 6 ರವರೆಗೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ 1978-79, 1991-92 ರಿಂದ 1993-94 ಹಾಗೂ 2014-15 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ನಿಪಿ-4 ರ ಪಹಣಿಯಂತೆ ಎಂ.ಆರ್. 47/1979-80 ರ ನೋಂದಣಿ ಸಂಖ್ಯೆ-290/1979-80 ರ ಖುಲಾಸೆಯಂತೆ ದಿನಾಂಕ 26.11.1979 ರ ಆದೇಶದಂತೆ ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿಗೆ ದಾವಾ ಸ್ವತ್ತಿನ ಕುರಿತು ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ನಿಪಿ-5 ರ ಪಹಣಿಯಂತೆ ಐ.ಹೆಚ್.ಸಿ.943/1983-84 ರ ಆದೇಶದಂತೆ ವಾದಿಯ ತಾಯಿಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರಿಗೆ ಖಾತೆ ಏರ್ಪಟ್ಟಿದ್ದು, ಸ್ವಾಧೀನದಾರರು ಮತ್ತು ವ್ಯವಸಾಯಗಾರರು ಎಂಬಲ್ಲಿ ಸದರಿರವರ ಹೆಸರು ನಮೂದು ಇರುವುದು ಕಂಡುಬರುತ್ತದೆ. ನಿಪಿ-6 ರ ಪಹಣಿಯಂತೆ ಐ.ಹೆಚ್. ಸಿ.943/1983-84 ರ ಆದೇಶದಂತೆ ವಾದಿಯ ತಾಯಿಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರಿಗೆ ಖಾತೆ ಏರ್ಪಟ್ಟಿದ್ದು, ಸ್ವಾಧೀನದಾರರು ಮತ್ತು ವ್ಯವಸಾಯ ಗಾರರು ಎಂಬಲ್ಲಿ ಸದರಿರವರ ಹೆಸರು ನಮೂದು ಇರುವುದು ಕಂಡುಬರುತ್ತದೆ. ಈ ಮೇಲ್ಕಂಡ ಪಹಣಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ದಾವಾ ಸ್ವತ್ತಿನ ಕುರಿತಾಗಿ ವಾದಿಯ ತಂದೆಯ ಹೆಸರಿಗೆ 1979 ನೇ ಸಾಲಿನಲ್ಲಿ ಖಾತೆ ಏರ್ಪಟ್ಟಿದ್ದು, 1991-92 ರಿಂದ ದಾವೆಯನ್ನು ಸಲ್ಲಿಸುವ ಅವಧಿಯವರೆಗೆ ಅಂದರೆ 2014-15 ನೇ

ಸಾಲಿನವರೆಗೆ ದಾವಾ ಸ್ವತ್ತಿನ ಖಾತೆಯು ವಾದಿಯ ತಾಯಿಯ ಹೆಸರಿನಲ್ಲಿ ನಮೂದಾಗಿದ್ದು, ಸ್ವಾಧೀನದಾರರು ಮತ್ತು ವ್ಯವಸಾಯಗಾರರು ಎಂಬಲ್ಲಿ ವಾದಿಯ ತಾಯಿಯ ಹೆಸರು ನಮೂದು ಇರುವುದು ಕಂಡುಬರುತ್ತದೆ. ಆದ್ದರಿಂದ ಈ ಮೇಲ್ಕಂಡ ದಾಖಲಾತಿಗಳಂತೆ ವಾದಿಯ ತಂದೆ ಹಾಗೂ ವಾದಿ 35 ವರ್ಷಗಳಿಂದ ದಾವಾ ಸ್ವತ್ತಿನ ಕುರಿತಾಗಿ ಖಾತೆದಾರರಾಗಿ ಸ್ವಾಧೀನತೆಯನ್ನು ಹೊಂದಿರುವ ಕುರಿತು ಪೂರ್ವಭಾವನೆ ಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-9 ರಂತೆ ವಾದಿಯು 2013 ನೇ ಸಾಲಿನಲ್ಲಿ ದಾವಾ ಅನುಸೂಚಿತ ಸ್ವತ್ತಿಗೆ ಕಂದಾಯವನ್ನು ಪಾವತಿಸುವ ಕುರಿತಾಗಿ ರಶೀದಿಯನ್ನು ಹಾಜರುಪಡಿಸಿರುತ್ತಾರೆ. ಈ ದಾಖಲಾತಿಯು ಸಹ ನಿಪಿ-2 ರಿಂದ 6 ರ ದಾಖಲಾತಿಗಳಿಗೆ ಪೂರಕವಾಗಿದ್ದು, ಹಾಗಾಗಿ ವಾದಿಯು ದಾವಾ ಸ್ವತ್ತಿನ ಕುರಿತಾಗಿ ಖಾತೆದಾರರಾಗಿ ಕಂದಾಯವನ್ನು ಪಾವತಿಸಿರುವ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-10 ಮತ್ತು 11 ರಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಚಿತ್ರದುರ್ಗ ಉಪವಿಭಾಗರವರ ಆರ್.ಎ. ಸಂಖ್ಯೆ-38/2012-13 ರ ಆದೇಶ ಪುಟ ಮತ್ತು ಆದೇಶದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ 5 ನೇ ಪ್ರತಿವಾದಿಯು ಸಲ್ಲಿಸಿದ್ದ ಮೇಲ್ಮನವಿಯ ಕುರಿತಾಗಿ ಪುರಸ್ಕರಿಸಿ, ವಾದಿಯ ತಾಯಿಯ ಹೆಸರಿನಲ್ಲಿದ್ದ ದಾವಾ ಸ್ವತ್ತಿನ ಕುರಿತಾದ ಖಾತೆಯನ್ನು ರದ್ದುಪಡಿಸಿ, 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ಅಡಿವೆಪ್ಪರವರ ಹೆಸರಿಗೆ ಖಾತೆ ನಮೂದಿಸುವಂತೆ ಆದೇಶಿಸಿರುವುದು ಕಂಡುಬರುತ್ತದೆ. ನಿಪಿ-8 ರಂತೆ ಹೊಳಲ್ಕೆರೆ ಗ್ರಾಮದ ಎಂ.ಆರ್.ಹೆಚ್.72/2014-15 ರ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಆರ್.ಎ. ಸಂಖ್ಯೆ-38/2012-13 ರ ಆದೇಶದಂತೆ ದಾವಾ ಸ್ವತ್ತಿನ ಖಾತೆಯನ್ನು ವಾದಿಯ ತಾಯಿ ಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರಿನಿಂದ ರಾಮಪ್ಪ ಬಿನ್ ಅಡಿವೆಪ್ಪರವರ ಹೆಸರಿಗೆ ಖಾತೆ ನಮೂದು ಮಾಡಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ನಿಪಿ-9 ರಿಂದ 11 ರವರೆಗಿನ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, 5 ನೇ ಪ್ರತಿವಾದಿಯ ತಂದೆಯ ಹೆಸರಿಗೆ ದಿನಾಂಕ 28.10.1954 ರ ನೋಂದಣಿ ಕ್ರಯ

ಪತ್ರದ ಆಧಾರದಲ್ಲಿ ಖಾತೆ ನಮೂದು ಮಾಡಿರುವುದು ಕಂಡುಬರುತ್ತದೆ. ಹಾಗಾಗಿ ನಿಪಿ-2 ರಂತೆ ಹಾಜರುಪಡಿಸಿರುವಂತಹ ದಿನಾಂಕ 24.09.1979 ರ ದಾಖಲಾತಿಯ ಕುರಿತು ಕಾನೂನಿನ ಪ್ರಕ್ರಿಯೆಯ ಅಡಿಯಲ್ಲಿ ಮಾಲೀಕತ್ವದ ಹಕ್ಕನ್ನು ಅರ್ಜಿಸಿರುವುದನ್ನು ವಾದಿಯು ರುಜುವಾತುಪಡಿಸಲು ವಿಫಲರಾಗಿದ್ದು, ಆದಾಗ್ಯೂ ಸದರಿ ದಾಖಲಾತಿಯ ಆಧಾರದಲ್ಲಿ ಸ್ವಾಧೀನತೆಯನ್ನು ಪಡೆದುಕೊಂಡಿರುವುದು ಹಾಗೂ ಆ ನಂತರದಲ್ಲಿ ದಾವೆಯನ್ನು ಸಲ್ಲಿಸುವ ಅವಧಿಯವರೆಗೂ ಸ್ವಾಧೀನತೆಯನ್ನು ಹೊಂದಿರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ನಿಬಂಧನೆಗೊಳಪಟ್ಟು ನಿಪಿ-9 ರಿಂದ 11 ರ ದಾಖಲಾತಿಗಳ ಕುರಿತು ಪರಿಗಣಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

15. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ ವಾದಿಯ ಪರ ದಾಖಲಾತಿಗಳನ್ನು ಪರಿಶೀಲಿಸಿದ ನಂತರದಲ್ಲಿ, ಪ್ರತಿವಾದಿಯರ ಪರವಾಗಿ ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಪರಿಶೀಲಿಸಲಾಗಿ, ನಿಡಿ-1 ರಂತೆ ದಿನಾಂಕ 24.06.1945 ರ ನೋಂದಣಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ಹೊಳಲ್ಕೆರೆ ಟೌನಿನ ಜಂಬಿಗೆ ಸಿದ್ದಪ್ಪರವರ ಮಕ್ಕಳಾದ ಚಿಕ್ಕಬಸಪ್ಪರವರಿಗೆ ಹೊಳಲ್ಕೆರೆ ಟೌನಿನ ತಳವಾರ ಅಡಿವೆಪ್ಪರವರ ಮಗನಾದ ಅರಣ್ಯ ರಕ್ಷಕರಾದ ರಾಮಪ್ಪ ಮತ್ತು ಹುಚ್ಚಪ್ಪರವರು ಹೊಳಲ್ಕೆರೆ ಗ್ರಾಮದ ಸರ್ವೇ ನಂ.30/3 ರ 10 ಎಕರೆ 30 ಗುಂಟೆ ಸ್ವತ್ತನ್ನು ಪೂರ್ವಕ್ಕೆ-ಇದೇ ನಂಬರಿನ ಪೈಕಿ 4 ನೇ ಪೋಡು, ದಕ್ಷಿಣಕ್ಕೆ-ಸರ್ವೇ ನಂ. 31 ರ ಸ್ವತ್ತು, ಪಶ್ಚಿಮಕ್ಕೆ-ಇದೇ ನಂಬರಿನ ಪೈಕಿ 2 ನೇ ಪೋಡು ಮತ್ತು ಉತ್ತರಕ್ಕೆ-23 ನೇ ಸರ್ವೇ ನಂಬರಿನ ಸ್ವತ್ತು ಎಂಬ ಚಕ್ಕುಬಂದಿಗೊಳಪಟ್ಟಂತಹ ಸ್ವತ್ತನ್ನು ಹಾಗೂ ಇತರೆ ಸ್ವತ್ತುಗಳನ್ನು ಕ್ರಯಕ್ಕೆ ನೀಡಿರುವುದು ಕಂಡುಬರುತ್ತದೆ. ನಿಡಿ-2 ರಂತೆ ದಿನಾಂಕ 28.10.1954 ರ ನೋಂದಣಿ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದರಂತೆ ಹೊಳಲ್ಕೆರೆ ಟೌನಿನ ತಳವಾರ ಅಡಿವೆಪ್ಪರವರ ಮಗನಾದ ಅರಣ್ಯ ರಕ್ಷಕರಾದ ರಾಮಪ್ಪರವರಿಗೆ ಹೊಳಲ್ಕೆರೆ ಟೌನಿನ ಜಂಬಿಗೆ ಸಿದ್ದಯ್ಯರವರ ಮಗನಾದ ಚಿಕ್ಕಬಸಯ್ಯರವರು ಹೊಳಲ್ಕೆರೆ ಟೌನಿನ ಸರ್ವೇ ನಂ.30/3 ರ 10 ಎಕರೆ 30 ಗುಂಟೆ ಸ್ವತ್ತನ್ನು ಪೂರ್ವಕ್ಕೆ

-ಇದೇ ನಂಬರಿನ ಪೈಕಿ 4 ನೇ ಪೋಡು, ಪಶ್ಚಿಮಕ್ಕೆ-ಇದೇ ನಂಬರಿನ ಪೈಕಿ 2 ನೇ ಪೋಡು, ಉತ್ತರಕ್ಕೆ-ಸರ್ವೇ ನಂ.23 ರ ಸ್ವತ್ತು ಮತ್ತು ದಕ್ಷಿಣಕ್ಕೆ-ಸರ್ವೇ ನಂ.31 ರ ಸ್ವತ್ತು ಎಂಬ ಚಕ್ಕುಬಂದಿಗೊಳಪಟ್ಟಂತೆ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು, ಇತರೆ ಸ್ವತ್ತು ಗಳನ್ನು ಸಹ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿ ಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಾದಿಯ ತಂದೆಯಾದ ಹುಚ್ಚಪ್ಪ ಮತ್ತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರು ಒಟ್ಟಾಗಿ ದಾವಾ ಸರ್ವೇ ನಂಬರಿನ ಸ್ವತ್ತನ್ನು 1945 ರಲ್ಲಿ ಕ್ರಯಕ್ಕೆ ನೀಡಿದ್ದು, ಆ ನಂತರದಲ್ಲಿ 5 ನೇ ಪ್ರತಿವಾದಿಯ ತಂದೆ ಯಾದ ರಾಮಪ್ಪರವರು ದಾವಾ ಸರ್ವೇ ನಂಬರಿನ ಸ್ವತ್ತನ್ನು ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಾವಾ ಅನುಸೂಚಿತ ಸ್ವತ್ತು ಮೂಲತಃ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದು ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ದಾವಾ ಸರ್ವೇ ನಂಬರಿನ ಸ್ವತ್ತನ್ನು ವಾದಿಯ ತಂದೆಯಾದ ಹುಚ್ಚಪ್ಪ ಮತ್ತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರು 1945 ರಲ್ಲಿ ಮಾರಾಟ ಮಾಡಿದ್ದು, ಆ ನಂತರದಲ್ಲಿ ಅದೇ ಸ್ವತ್ತನ್ನು 5 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ದಾಖಲಾತಿಗಳ ಆಧಾರದಲ್ಲಿ ವಿವಾದಾಂಶ ಸಂಖ್ಯೆ-2 ರ ಕುರಿತು ಪ್ರತಿವಾದಿಯರ ಪರವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾ ಗುತ್ತದೆ. ನಿಡಿ-3 ಮತ್ತು 4 ರಂತೆ ದಾವಾ ಅನುಸೂಚಿತ ಸರ್ವೇ ನಂಬರಿಗೆ ಸಂಬಂಧಿಸಿದ 2014-15 ನೇ ಸಾಲಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ಎಂ.ಆರ್.ಹೆಚ್.72/2014-15 ರ ಕೋರ್ಟಿನ ಆದೇಶದಂತೆ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿಗೆ ಖಾತೆ ಏರ್ಪಟ್ಟಿದ್ದು, ಸ್ವಾಧೀನದಾರರು ಮತ್ತು ವ್ಯವಸಾಯಗಾರರು ಎಂಬಲ್ಲಿ ಸದರಿರವರ ಹೆಸರು ನಮೂದಾಗಿರುವುದು ಕಂಡುಬರುತ್ತದೆ. ಈ ಕುರಿತು ನಿಪಿ-4 ರಿಂದ 6 ರವರೆಗಿನ ಪಹಣಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ಎಂ.ಆರ್.42/1979-80 ರ ಆದೇಶ

ದಂತೆ ದಾವಾ ಸ್ವತ್ತಿನ ಖಾತೆಯು ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿನಲ್ಲಿ ನಮೂದಾಗಿದ್ದು, 1991-92 ರಿಂದ 2014-15 ನೇ ಸಾಲಿನವರೆಗೆ ವಾದಿಯ ತಾಯಿಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರ ಹೆಸರಿನಲ್ಲಿ ಐ.ಹೆಚ್.ಸಿ.943/1983-84 ರ ಆದೇಶದಂತೆ ಖಾತೆ ಏರ್ಪಟ್ಟಿದ್ದು, ಸ್ವಾಧೀನ ದಾರರು ಮತ್ತು ವ್ಯವಸಾಯಗಾರರು ಎಂಬಲ್ಲಿ ಸದರಿರವರ ಹೆಸರು ನಮೂದಾಗಿ ರುವುದು ಕಂಡುಬರುತ್ತದೆ. ಈ ದಾಖಲಾತಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ದಾವೆಯನ್ನು ಸಲ್ಲಿಸುವ ಅವಧಿಯವರೆಗೂ ಕಳೆದ 25 ವರ್ಷ ಗಳಿಂದ ದಾವಾ ಸ್ವತ್ತಿನ ಕುರಿತಾಗಿ ವಾದಿಯ ತಂದೆಯ ಹೆಸರಿನಲ್ಲಿ ಖಾತೆ ಏರ್ಪಟ್ಟಿದ್ದು, ಆ ನಂತರದಲ್ಲಿ ವಾದಿಯ ತಾಯಿಯ ಹೆಸರಿಗೆ ಬದಲಾಗಿರುವುದು ಕಂಡುಬರುತ್ತದೆ. ಹಾಗಾಗಿ ಈ ಕುರಿತು ವಾದಿ ಕುಟುಂಬದವರು ದಾವಾ ಸ್ವತ್ತಿನ ಕುರಿತು ದಾವೆಯನ್ನು ಸಲ್ಲಿಸುವ ಅವಧಿಯವರೆಗೂ ಖಾತೆದಾರರಾಗಿದ್ದರು ಎಂಬುದರ ಕುರಿತು ಪೂರ್ವ ಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ನಿಪಿ-11 ರ ಆದೇಶದಂತೆ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರ ಹೆಸರಿಗೆ ಖಾತೆ ನಮೂದಿಸುವಂತೆ ಆದೇಶಿಸಿದ್ದಾಗ್ಯೂ, ಈ ಪ್ರಕರಣದ ವಾದಿಗೆ ದಿನಾಂಕ 24.09.1979 ರ ನೋಂದಣಿ ಪಾಲು ವಿಭಾಗದ ಕುರಿತು ಪರಿಹಾರ ಕಂಡುಕೊಳ್ಳಲು ಹಕ್ಕನ್ನು ಕಾಯ್ದಿರಿಸುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ನಿಪಿ-1 ರ ದಾಖಲಾತಿಯ ಆಧಾರದಲ್ಲಿ ನಿಪಿ-3 ರ ಮ್ಯುಟೇಶನ್ ವಹಿ ಏರ್ಪಟ್ಟಿದ್ದು, ಆ ನಂತರದಲ್ಲಿ ನಿಪಿ-4 ರಿಂದ 6 ರವರೆಗಿನ ಪಹಣಿಗಳಲ್ಲಿ ವಾದಿ ಕುಟುಂಬದವರ ಹೆಸರು ನಮೂದಾಗಿದ್ದು, ಹಾಗಾಗಿ ನಿಡಿ-3 ರ ಕುರಿತಾಗಿ ಪ್ರತಿವಾದಿಯರ ಪರವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

16. ಈ ಮೇಲ್ಕಂಡ ವಿವಾದಾಂಶಗಳ ಕುರಿತಾಗಿ ವಾದಿಯ ಪರ ದಾಖಲಾತಿ ಗಳನ್ನು ಪರಿಶೀಲಿಸಿದ ನಂತರದಲ್ಲಿ, ಪ್ರತಿವಾದಿಯರ ಪರವಾಗಿ ಹಾಜರುಪಡಿಸಿರು ವಂತಹ ದಾಖಲಾತಿಗಳನ್ನು ಪರಿಶೀಲಿಸಲಾಗಿ, ನಿಡಿ-10 ರಿಂದ 25 ರವರೆಗೆ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ 1966-67 ನೇ ಸಾಲಿನಿಂದ 1989-90

ರವರೆಗಿನ ಹಾಗೂ 2014-15 ನೇ ಸಾಲಿನಿಂದ 2020-21 ನೇ ಸಾಲಿನವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಅದರಂತೆ ದಾವಾ ಸರ್ವೇ ನಂ.30/3 ರ 10 ಎಕರೆ 30 ಗುಂಟೆ ಸ್ವತ್ತಿನ ಖಾತೆಯು 1965-66 ರಿಂದ 1973-74 ರವರೆಗೆ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿನಲ್ಲಿ ನಮೂದು ಇದ್ದು, 1975-76 ರಿಂದ 1979-80 ರ ಪಹಣಿಗಳಂತೆ, ಎಂ.ಆರ್. 42/1979-80 ರಂತೆ ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ತಳವಾರ ಅಡಿವೆಪ್ಪ ರವರ ಹೆಸರಿಗೆ 2 ಎಕರೆ 20 ಗುಂಟೆ ಸ್ವತ್ತಿನ ಕುರಿತು ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ಅಂತೆಯೆ 1980-81 ರಿಂದ 1989-90 ರವರೆಗಿನ ಪಹಣಿಗಳಂತೆ, 10 ಎಕರೆ 30 ಗುಂಟೆ ಸ್ವತ್ತಿನ ಪೈಕಿ ಮುಂದಿನ ಪುಟದಲ್ಲಿ 2 ಎಕರೆ 20 ಗುಂಟೆ ಸ್ವತ್ತಿನ ಕುರಿತು ಉಲ್ಲೇಖ ಇದೆ ಎಂದು ನಮೂದಿಸಿ, ಉಳಿಕೆ 8 ಎಕರೆ 10 ಗುಂಟೆ ಸ್ವತ್ತಿನ ಕುರಿತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ಹೆಸರಿನಲ್ಲಿ ಖಾತೆ ನಮೂದಾಗಿದ್ದು, ಸದರಿ 8 ಎಕರೆ 10 ಗುಂಟೆ ಸ್ವತ್ತಿನ ಕುರಿತು ಮಾತ್ರ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪರವರ ವ್ಯವಸಾಯಗಾರರು ಮತ್ತು ಸ್ವಾಧೀನದಾರರು ಆಗಿರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎಂ.ಆರ್.42/1979-80 ರ ನಂತರದಲ್ಲಿ ದಾವಾ ಸ್ವತ್ತಿನ ಕುರಿತಾಗಿ ವಾದಿಯ ತಂದೆ ಯಾದ ಹುಚ್ಚಪ್ಪ ಬಿನ್ ತಳವಾರ ಅಡಿವೆಪ್ಪರವರ ಖಾತೆದಾರರಾಗಿರುತ್ತಾರೆ ಎಂಬುದರ ಕುರಿತು ಮತ್ತು ಸದರಿ ಸ್ವತ್ತಿನ ಕುರಿತು ಸ್ವಾಧೀನದಾರರಾಗಿ ವ್ಯವಸಾಯವನ್ನು ಸಹ ಮಾಡುತ್ತಿದ್ದರು ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾ ಗುತ್ತದೆ. ಅಂತೆಯೆ ದಾವಾ ಸ್ವತ್ತಿನ ಕುರಿತಾಗಿ 2014-15 ರಿಂದ 2020-21 ರವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳಂತೆ ಪ್ರಾರಂಭಿಕ ಹಂತದಲ್ಲಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪ ರವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಏರ್ಪಟ್ಟಿದ್ದು, ಆ ನಂತರದಲ್ಲಿ ಎಂ.ಆರ್. ಹೆಚ್.28/2016-17 ರ ಪೌತಿ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ

ಏರ್ಪಟ್ಟಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ಖಾತೆಯು ನಿಪಿ-11 ರಂತೆ ಹಾಜರುಪಡಿಸಿರುವಂತಹ ನಿಬಂಧನೆಗೊಳಪಟ್ಟಿರುತ್ತದೆ. ಹಾಗಾಗಿ ವಾದಿಯ ತಂದೆಯು ನಿಪಿ-2 ರಂತೆ ಹಾಜರುಪಡಿಸಿರುವ ದಿನಾಂಕ 24.09.1979 ರ ನೋಂದಣಿ ಏಕವಿಭಾಗ ಪತ್ರದಂತೆ ದಾವಾ ಸ್ವತ್ತಿನ ಕುರಿತಾಗಿ ಮಾಲೀಕತ್ವವನ್ನು ಹೊಂದಿರುವುದನ್ನು ರುಜುವಾತುಪಡಿಸಲು ವಿಫಲವಾಗಿದ್ದಾಗ್ಯೂ, ನಿಪಿ-2 ರ ದಾಖಲಾತಿಯ ಆಧಾರದಲ್ಲಿ ಏರ್ಪಟ್ಟಿರುವ ನಿಪಿ-3 ರಂತೆ ಹಾಜರುಪಡಿಸಿರುವ ಎಂ.ಆರ್.42/1979-80 ರ ಮ್ಯುಟೇಶನ್ ವಹಿ, ನಿಪಿ-4 ರಿಂದ 6 ರಂತೆ ಹಾಜರುಪಡಿಸಿರುವ ಪಹಣಿಗಳನು ಮತ್ತು ನಿಡಿ-10 ರಿಂದ 14 ರವರೆಗಿನ ಪಹಣಿಗಳನ್ನು ಪರಿಶೀಲಿಸಲಾಗಿ, ವಾದಿಯ ತಂದೆಯು ದಾವಾ ಸ್ವತ್ತಿನ ಕುರಿತಾಗಿ ಸ್ವಾಧೀನತೆಯನ್ನು ಅರ್ಜಿಸಿರುವುದು ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ನಿಪಿ-20 ರಿಂದ 24 ರವರೆಗಿನ ದಾಖಲಾತಿಗಳ ಕುರಿತಾಗಿ ಪ್ರತಿವಾದಿಯರ ಪರವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-26 ರಿಂದ 32 ರವರೆಗೆ ಸರ್ವೇ ನಂ.30 ರ ಜಮೀನಿಗೆ ಕಂದಾಯವನ್ನು ಪಾವತಿಸಿರುವ ಕುರಿತಾಗಿ ಪಟ್ಟಾ ಪುಸ್ತಕ ಮತ್ತು ಕಂದಾಯ ರಶೀದಿಗಳನ್ನು ಹಾಜರುಪಡಿಸಿದ್ದಾಗ್ಯೂ, ಸದರಿ ದಾಖಲಾತಿಗಳಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣದ ಕುರಿತು ಮತ್ತು ದಾವಾ ಸರ್ವೇ ನಂಬರಿನ ಕುರಿತು ಸ್ಪಷ್ಟವಾದ ಉಲ್ಲೇಖ ಇರುವುದಿಲ್ಲ. ಹಾಗಾಗಿ ಸದರಿ ದಾಖಲಾತಿಗಳ ಕುರಿತಾಗಿ ಪ್ರತಿವಾದಿಯರ ಪರವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

17. ಈ ಮೇಲ್ಕಂಡ ಉಭಯ ಪಕ್ಷಗಾರರ ದಾಖಲಾತಿ ಸಾಕ್ಷ್ಯದ ನಂತರದಲ್ಲಿ, ಮೌಖಿಕ ಸಾಕ್ಷ್ಯದ ಕುರಿತು ಪರಿಶೀಲಿಸಲಾಗಿ, ಪಿ.ಡಬ್ಲ್ಯೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ತನ್ನ ತಂದೆ ಮತ್ತು ತನ್ನ ದೊಡ್ಡಪ್ಪನ ವಿವಾಹ 1939-40 ನೇ ಸಾಲಿನಲ್ಲಿ ಆಗಿತ್ತು ಎಂಬುದನ್ನು ಹಾಗೂ ಸದರಿ ಸಮಯದಲ್ಲಿ ತನ್ನ ದೊಡ್ಡಪ್ಪ ಸರ್ಕಾರಿ ನೌಕರಿಯಲ್ಲಿ ಇದ್ದರು ಎಂಬುದನ್ನು ಹಾಗೂ ತನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂಬುದನ್ನು ಒಪ್ಪಿರುತ್ತಾರೆ. ತನ್ನ ತಂದೆ ಮತ್ತು ದೊಡ್ಡಪ್ಪನಿಗೆ ಪಿತ್ರಾರ್ಜಿತವಾಗಿ

ಸುಮಾರು 10 ಎಕರೆ 30 ಗುಂಟೆ ಜಮೀನು ಇದ್ದು, ಸದರಿ 10 ಎಕರೆ 30 ಗುಂಟೆ ಜಮೀನು ಈಗಲೂ ತಮ್ಮ ಸ್ವಾಧೀನದಲ್ಲಿಯೆ ಇದೆ ಎಂದು ನುಡಿದಿರುತ್ತಾರೆ. ತನ್ನ ತಂದೆ ಮತ್ತು ದೊಡ್ಡಪ್ಪ ಅವರ ವಿವಾಹದ ನಂತರದಲ್ಲಿ ಒಟ್ಟು ಕುಟುಂಬದ ಸ್ವತ್ತು ಗಳನ್ನು 1945 ನೇ ಸಾಲಿನಲ್ಲಿ ಮಾರಾಟ ಮಾಡಿದ್ದರು ಎಂಬುದನ್ನು ಅಲ್ಲಗಳೆದಿ ರುತ್ತಾರೆ. ತನ್ನ ದೊಡ್ಡಪ್ಪನ ಮೊದಲನೆ ಪತ್ನಿ ವಿವಾಹದ 2 ವರ್ಷದಲ್ಲಿಯೆ ಮೃತಪಟ್ಟ ನಂತರ, 1 ನೇ ಪ್ರತಿವಾದಿಯನ್ನು ವಿವಾಹವಾಗಿದ್ದರು ಎಂಬುದನ್ನು ಒಪ್ಪಿರುತ್ತಾರೆ. ವಿವಾಹದ ನಂತರದಲ್ಲಿ ತನ್ನ ದೊಡ್ಡಪ್ಪ ಹಿರಿಯೂರಿನಲ್ಲಿ ಕೆಲಸ ಮಾಡಿಕೊಂಡು, ಅಲ್ಲಿಯೆ ವಾಸವಿದ್ದರು ಎಂಬುದನ್ನು ಒಪ್ಪಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ನಿಡಿ-1 ಮತ್ತು 2 ರ ದಾಖಲಾತಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ವಾದಿಯ ತಂದೆಯಾದ ಹುಚ್ಚಪ್ಪ ಮತ್ತು 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರು ದಾವಾ ಸರ್ವೇ ನಂಬರಿನ ಸ್ವತ್ತನ್ನು 5 ನೇ ಪ್ರತಿವಾದಿಯ ತಂದೆಯ ವಿವಾಹದ ಸಲುವಾಗಿ ದಿನಾಂಕ 24.06.1945 ರಂದು ಮಾರಾಟ ಮಾಡಿದ್ದು, ಆ ನಂತರದಲ್ಲಿ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರು ದಿನಾಂಕ 28.10.1954 ರಲ್ಲಿ ದಾವಾ ಸ್ವತ್ತನ್ನು ಸದರಿರವರ ಹೆಸರಿಗೆ ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಹಾಗಾಗಿ ಮೇಲ್ಕಂಡ ಅಂಶಗಳ ಕುರಿತಾಗಿ ದಾವಾ ಅನುಸೂಚಿತ ಸರ್ವೇ ನಂಬರಿನ ಸ್ವತ್ತು ಮೂಲತಃ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದಂತಹ ಸ್ವತ್ತು ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪಿ.ಡಬ್ಲ್ಯೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, 1946 ರಿಂದ ತನ್ನ ತಂದೆ ಹುಚ್ಚಪ್ಪ ಮತ್ತು ತನ್ನ ದೊಡ್ಡಪ್ಪನಾದ ರಾಮಪ್ಪರವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬ ಪ್ರಶ್ನೆಗೆ, ಸಾಕ್ಷಿಯು ತನ್ನ ದೊಡ್ಡಪ್ಪ ನೌಕರಿಯ ಕುರಿತು ಹಿರಿಯೂರಿನಲ್ಲಿ ವಾಸವಿದ್ದು, ತಾವೆಲ್ಲರೂ ಒಟ್ಟಾಗಿ ಊರಿನಲ್ಲಿ ಒಂದೇ ಮನೆಯಲ್ಲಿ ವಾಸ ಇದ್ದೇವು ಎಂದು ನುಡಿದಿರುತ್ತಾರೆ. ತನ್ನ ತಂದೆ ಮತ್ತು ದೊಡ್ಡಪ್ಪನಿಗೆ 10 ಎಕರೆ 30 ಗುಂಟೆ ಜಮೀನನ್ನು ಹೊರತುಪಡಿಸಿ, ಬೇರೆ ಪಿತ್ರಾರ್ಜಿತ ಸ್ವತ್ತು ಇಲ್ಲವೆಂದು ನುಡಿದಿರುತ್ತಾರೆ. ದಾವಾ ಸರ್ವೇ ನಂಬರಿನಲ್ಲಿನ ಒಟ್ಟು 10 ಎಕರೆ 30

ಗುಂಟೆ ಜಮೀನಿನಲ್ಲಿ ತನ್ನ ದೊಡ್ಡಪ್ಪನಾದ ರಾಮಪ್ಪರವರು ದಿನಾಂಕ 28.10.1954 ರಂದು ಖರೀದಿಸಿದ ದಿನದಿಂದ ಸದರಿರವರೆ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂಬುದನ್ನು ಅಲ್ಲಗಳೆದು, ತಾನು ಸಹ ದಾವಾ ಸ್ವತ್ತನ್ನು ಅನುಭವಿಸುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಇಂದಿಗೂ ಸಹ ತನ್ನ ದೊಡ್ಡಪ್ಪ ರಾಮಪ್ಪರವರ ಪತ್ನಿ ಹಾಗೂ ಮಕ್ಕಳು ದಾವಾ ಸರ್ವೇ ನಂಬರಿನ 10 ಎಕರೆ 30 ಗುಂಟೆ ಜಮೀನನ್ನು ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂಬುದನ್ನು ಅಲ್ಲಗಳೆದು, ದಾವಾ ಸ್ವತ್ತನ್ನು ತಾನೆ ಸಾಗು ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಾದಿ ಕುಟುಂಬ ದವರು ದಾವಾ ಸ್ವತ್ತಿನ ಕುರಿತು ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬುದರ ಕುರಿತು ಪರಿಗಣಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

18. ಈ ಮೇಲ್ಕಂಡ ಉಭಯ ಪಕ್ಷಗಾರರ ದಾಖಲಾತಿ ಸಾಕ್ಷ್ಯದ ನಂತರದಲ್ಲಿ, ಮೌಖಿಕ ಸಾಕ್ಷ್ಯದ ಕುರಿತು ಪರಿಶೀಲಿಸಲಾಗಿ, ಪಿ.ಡಬ್ಲೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, ತಾನು ಈ ದಾವೆಯನ್ನು ದಾವಾ ಸರ್ವೇ ನಂಬರಿನಲ್ಲಿನ 2 ಎಕರೆ 20 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲಿಸಿದ್ದು, ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳು ಈಗ ತನ್ನ ತಂದೆ ಹುಚ್ಚಪ್ಪ ಮತ್ತು ತಾಯಿಯಾದ ಲಕ್ಷ್ಮಮ್ಮರವರ ಹೆಸರಿನಲ್ಲಿ ಇದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಪಹಣಿಗಳು ಪ್ರಸ್ತುತ 5ನೇ ಪ್ರತಿವಾದಿಯ ತಾಯಿಯಾದ 1ನೇ ಪ್ರತಿವಾದಿ ಲಕ್ಷ್ಮಮ್ಮರವರ ಹೆಸರಿನಲ್ಲಿ ಇದೆ ಎಂಬ ಪ್ರಶ್ನೆಗೆ, ಸಾಕ್ಷಿಯು ಸದರಿ ಪಹಣಿಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಯಾವುದೇ ಕಂದಾಯದ ದಾಖಲಾತಿಗಳು ಈಗ ತನ್ನ ಹೆಸರಿನಲ್ಲಿ ಇಲ್ಲ ಎಂಬುದನ್ನು ಒಪ್ಪಿದ್ದು, ಈ ಹಿಂದೆ ತನ್ನ ತಂದೆಯ ಹೆಸರಿಗೆ ಕಂದಾಯ ದಾಖಲಾತಿಗಳು ಇದ್ದವು ಎಂದು ನುಡಿದಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ-3ರ ಮ್ಯುಟೇಶನ್ ವಹಿಯ ಪ್ರಕಾರ, 1979-80ನೇ ಸಾಲಿನಲ್ಲಿ ವಾದಿಯ ತಂದೆಯ ಹೆಸರಿನಲ್ಲಿ ಖಾತೆ ಏರ್ಪಟ್ಟಿದ್ದು, ನಿಪಿ-4 ರಿಂದ 6 ಮತ್ತು 10 ರಿಂದ 14ರವರೆಗಿನ

ಪಹಣಿಗಳಂತೆ, 2014-15 ನೇ ಸಾಲಿನವರೆಗೆ ವಾದಿಯ ತಾಯಿಯ ಹೆಸರಿನಲ್ಲಿ ಖಾತೆ ಇರುವುದು ಹಾಗೂ ಕಂದಾಯ ದಾಖಲಾತಿಗಳು ಇರುವುದು ಕಂಡುಬರುತ್ತದೆ. ನಿಪಿ-11 ರಂತೆ ಪ್ರತಿವಾದಿಯ ಹೆಸರಿಗೆ 2014-15 ನೇ ಸಾಲಿನಲ್ಲಿ ಖಾತೆ ಏರ್ಪಟ್ಟ ದಿನಾಂಕದಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಹಾಗಾಗಿ ದಾವೆಯನ್ನು ಸಲ್ಲಿಸುವ ಕಾಲಕ್ಕೆ ವಾದಿಯ ಕುಟುಂಬದವರ ಹೆಸರಿನಲ್ಲಿ ಖಾತೆ ಇಲ್ಲ ಎಂಬ ಅಂಶದ ಆಧಾರದಲ್ಲಿ ಹಾಗೂ ಕಂದಾಯ ದಾಖಲಾತಿಗಳು ಇಲ್ಲ ಎಂಬ ಅಂಶದ ಆಧಾರದಲ್ಲಿ ಪ್ರತಿವಾದಿಯರ ನಿಲುವುಗಳ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಪಿ.ಡಬ್ಲೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, ದಾವಾ ಸ್ವತ್ತು ನಿಮಗೆ ಹೇಗೆ ಬಂದಿತ್ತು ಎಂಬ ಪ್ರಶ್ನೆಗೆ, ಸಾಕ್ಷಿಯು ತನ್ನ ತಂದೆ ಹುಚ್ಚಪ್ಪ ಮತ್ತು ತನ್ನ ದೊಡ್ಡಪ್ಪ ರಾಮಪ್ಪರವರ ನಡುವೆ ಏರ್ಪಟ್ಟಿದ್ದ ಪಾಲು ವಿಭಾಗದಲ್ಲಿ ಬಂದಿತ್ತು ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿ ನಿಪಿ-2 ಆಗಿದ್ದು, ಅದರ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂಬುದನ್ನು ಹಾಗೂ ಹಾಜರುಪಡಿಸಲು ತೊಂದರೆ ಇಲ್ಲವೆಂದು ನುಡಿದಿದ್ದು, ಅಂತಿಮವಾಗಿ ಸದರಿ ದಾಖಲಾತಿಯ ಮೂಲ ಪ್ರತಿ ಮನೆಯಲ್ಲಿ ಇಲ್ಲವೆಂದು ನುಡಿದಿರುತ್ತಾರೆ. ಈ ಕುರಿತು ನಿಪಿ-2 ರ ದಾಖಲಾತಿಯನ್ನು ಪರಿಶೀಲಿಸಲಾಗಿ, ಸದರಿ ದಾಖಲಾತಿ ನೋಂದಣಿ ದಾಖಲಾತಿಯಾಗಿದ್ದು, 30 ವರ್ಷಗಳ ಹಳೆಯ ದಾಖಲಾತಿಯಾಗಿರುತ್ತದೆ. ಹಾಗಾಗಿ ನಿಪಿ-2 ರ ದಾಖಲಾತಿ ಜಾರಿಯಾಗಿಲ್ಲ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಅಂತೆಯೆ ನಿಪಿ-2 ರ ದಾಖಲಾತಿಯ ಆಧಾರದಲ್ಲಿ ನಿಪಿ-3 ರ ಮ್ಯುಟೇಶನ್ ವಹಿ ಹಾಗೂ ನಂತರದ ಕಂದಾಯ ದಾಖಲಾತಿಗಳು ಏರ್ಪಟ್ಟಿರುವುದು ಕಂಡುಬರುತ್ತದೆ. ಆದ್ದರಿಂದ ನಿಪಿ-2 ರ ದಾಖಲಾತಿಯ ಕುರಿತು ಮಾಲೀಕತ್ವದ ಹಕ್ಕನ್ನು ನಿರ್ಣಯಿಸಲು ಬರುವುದಿಲ್ಲ ವಾದಾಗ್ಯೂ, ಸದರಿ ದಾಖಲಾತಿಯ ಆಧಾರದಲ್ಲಿ ವಾದಿಯ ತಂದೆ ದಾವಾ ಸ್ವತ್ತಿನ ಕುರಿತು ಸ್ವಾಧೀನತೆಯನ್ನು ಅರ್ಜಿಸಿರುವ ಬಗ್ಗೆ ಪರಿಗಣಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

19. ಈ ಮೇಲ್ಕಂಡ ವಿವಾದಾಂಶಗಳ ಕುರಿತು ವಾದಿಯ ಪರ ಸಾಕ್ಷ್ಯದ ನಂತರದಲ್ಲಿ, ಪ್ರತಿವಾದಿಯರ ಪರ ಸಾಕ್ಷ್ಯದ ಕುರಿತು ಪರಿಶೀಲಿಸಲಾಗಿ, ಡಿ.ಡಬ್ಲೂ-1 ರವರು ತನ್ನ ಪಾಟೀ ಸವಾಲಿನಲ್ಲಿ, ವಾದಿಯು ತನ್ನ ಚಿಕ್ಕಪ್ಪನ ಮಗನಾಗಿದ್ದು, ಆಸ್ತಿಯಲ್ಲಿ ಭಾಗ ಬರಬೇಕು ಎಂದು ಎರಡೂವರೆ ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. 1992 ರಿಂದ 1 ಎಕರೆ ಆಸ್ತಿಯನ್ನು ದಾನ ಎಂದು ಕೊಟ್ಟಿದ್ದು, ಸದರಿರವರು ಬೇಸಾಯ ಮಾಡುತ್ತಾರೆಂದು ನುಡಿದಿರುತ್ತಾರೆ. ತನ್ನ ತಾತನ ಹೆಸರು ಅಡಿವೆಪ್ಪ ಎಂದು, ಸದರಿರವರಿಗೆ ವಾದಿಯ ತಂದೆಯಾದ ಹುಚ್ಚಪ್ಪ ಮತ್ತು ತನ್ನ ತಂದೆಯಾದ ರಾಮಪ್ಪರವರು ಗಂಡು ಮಕ್ಕಳಿದ್ದು, ತಮ್ಮ ಕುಟುಂಬಕ್ಕೆ ಸರ್ವೇ ನಂ.30/4 ರಲ್ಲಿ 3 ಎಕರೆ ಸ್ವತ್ತು ಇದೆ ಎಂದು ನುಡಿದಿರುತ್ತಾರೆ. ಈ ಮೇಲ್ಕಂಡ ಹೇಳಿಕೆಗಳನ್ನು ಪರಿಶೀಲಿಸಲಾಗಿ, ವಾದಿ ಮತ್ತು ಪ್ರತಿವಾದಿಯರ ನಡುವಿನ ಸಂಬಂಧದ ಕುರಿತು ತಕರಾರು ಇಲ್ಲದಿರುವುದು ಕಂಡುಬರುತ್ತದೆ. ಅಂತೆಯೆ ಪ್ರತಿವಾದಿ ಯರ ಪರ ಹೇಳಿಕೆಯಂತೆಯೆ 1992 ರಿಂದ 1 ಎಕರೆ ಆಸ್ತಿಯನ್ನು ವಾದಿ ಕುಟುಂಬಕ್ಕೆ ದಾನ ಕೊಟ್ಟಿರುತ್ತಾರೆ ಎಂಬುದು ಕಂಡುಬರುತ್ತದೆ. ಹಾಗಾಗಿ ವಾದಿ ಕುಟುಂಬದವರು ಸದರಿ ಸ್ವತ್ತಿನ ಕುರಿತು 1992 ರಿಂದ ನಿರಂತರವಾದ ಮತ್ತು ನಿಶ್ಚಿತತೆಯ ಸ್ವಾಧೀನತೆ ಯನ್ನು ಹೊಂದಿರುತ್ತಾರೆ ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಡಿ.ಡಬ್ಲೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, ತನ್ನ ತಂದೆ ಅರಣ್ಯ ರಕ್ಷಕರಾಗಿ ಕೆಲಸ ಮಾಡುತ್ತಿದ್ದು, ವಾದಿಯ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ನಿಡಿ-1 ರ ಕ್ರಯ ಪತ್ರದಲ್ಲಿ ಏನು ಬರೆದಿದೆ ಎಂದು ತಾನು ತಿಳಿದುಕೊಂಡಿಲ್ಲವೆಂದು ನುಡಿದಿರುತ್ತಾರೆ. ತನ್ನ ತಂದೆ ಮತ್ತು ವಾದಿಯ ತಂದೆ ವಿಭಾಗ ಮಾಡಿಕೊಳ್ಳುವ ಸಲುವಾಗಿ ನಿಡಿ-1 ರಂತೆ ಕ್ರಯ ಪತ್ರ ಮಾಡಿರುತ್ತಾರೆಂದು ನುಡಿದಿರುತ್ತಾರೆ. ನಿಡಿ-1 ರ ಕ್ರಯ ಪತ್ರದಲ್ಲಿ ತಮ್ಮ ತಂದೆಯ ವಿವಾಹಕ್ಕಾಗಿ ಮಾರಾಟ ಮಾಡುತ್ತಿರುವ ಬಗ್ಗೆ ಬರೆದಿದೆ ಎಂಬುದನ್ನು ಒಪ್ಪಿರುತ್ತಾರೆ. ದಿನಾಂಕ 24.06.1945 ರಂದು ತಮ್ಮ ತಂದೆಯ ವಿವಾಹಕ್ಕಾಗಿ ತನ್ನ ತಂದೆ ಮತ್ತು ವಾದಿಯ ತಂದೆ ಸೇರಿ ನಿಡಿ-1 ರ ಕ್ರಯ ಪತ್ರದಂತೆ 4 ಆಸ್ತಿಗಳನ್ನು

ಮಾರಾಟ ಮಾಡಿದ್ದರು ಎಂಬುದನ್ನು ಹಾಗೂ ದಿನಾಂಕ 28.10.1954 ರಂದು ಒಟ್ಟು ಕುಟುಂಬದ ಆದಾಯದಿಂದ ದಾವಾ ಆಸ್ತಿ ಸೇರಿದಂತೆ ಮೂರು ಆಸ್ತಿಗಳನ್ನು ಖರೀದಿಸಿ ರುತ್ತಾರೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ಈ ಕುರಿತು ನಿಡಿ-1 ರ ಕ್ರಯ ಪತ್ರವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸದರಿ ಸ್ವತ್ತುಗಳನ್ನು 1 ನೇ ರಾಮಪ್ಪರವರ ವಿವಾಹಕ್ಕಾಗಿ ಮಾರಾಟ ಮಾಡುತ್ತಿರುವ ಕುರಿತು ಉಲ್ಲೇಖ ಇರುತ್ತದೆ. ಹಾಗಾಗಿ ದಾವಾ ಸ್ವತ್ತು ಸೇರಿದಂತೆ ನಿಡಿ-1 ರಲ್ಲಿನ ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಪತಿ ಹಾಗೂ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪರವರ ವಿವಾಹದ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾ ಗುತ್ತದೆ. ಅಂತೆಯೆ ನಿಡಿ-2 ರಂತೆ ದಿನಾಂಕ 28.10.1954 ರಲ್ಲಿ ದಾವಾ ಸ್ವತ್ತು ಸೇರಿದಂತೆ ಇತರೆ ಸ್ವತ್ತನ್ನು 1 ನೇ ಪ್ರತಿವಾದಿಯ ಪತಿ ಹಾಗೂ 5 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಖರೀದಿಸಿದ್ದು, ಆದಾಗ್ಯೂ ಸದರಿ ಸ್ವತ್ತನ್ನು ರಾಮಪ್ಪರವರ ಸ್ವಂತ ಆದಾಯದಿಂದ ಅರ್ಜಿಸಿರುತ್ತಾರೆ ಎಂಬುದರ ಕುರಿತು ವಿಚಾರಣಾ ನ್ಯಾಯಾಲಯದಲ್ಲಿ ಯಾವುದೇ ವಿವಾದಾಂಶವನ್ನು ರೂಪಿಸದ ಕಾರಣ, ರಾಮಪ್ಪರವರು ಖರೀದಿಸಿರುತ್ತಾರೆ ಎಂಬುದರ ಕುರಿತು ಮಾತ್ರ ಪರಿಗಣಿಸಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

20. ಈ ಮೇಲ್ಕಂಡ ವಿವಾದಾಂಶಗಳ ಕುರಿತು, ಡಿ.ಡಬ್ಲೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, ದಾವಾ ಆಸ್ತಿಯು ತನ್ನ ಚಿಕ್ಕಪ್ಪ ಹುಚ್ಚಪ್ಪರವರಿಗೆ ಪಾಲು ವಿಭಾಗದಂತೆ ಅವರ ಹೆಸರಿಗೆ ಖಾತೆಯಾಗಿ ಪಹಣಿಯು ಸಹ ಬರುತ್ತದೆ ಎಂಬುದನ್ನು ಒಪ್ಪಿರುತ್ತಾರೆ. ವಾದಿಯ ತಂದೆ 1983 ರಲ್ಲಿ ಮರಣ ಹೊಂದಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ನಂತರದಲ್ಲಿ ನಿಪಿ-5 ರ ಮ್ಯುಟೇಶನ್ ವಹಿಯಂತೆ ತನ್ನ ಚಿಕ್ಕಮ್ಮ ಲಕ್ಕಮ್ಮರವರ ಹೆಸರಿಗೆ ದಾವಾ ಆಸ್ತಿಯ ಖಾತೆ ಆಗಿರುತ್ತದೆ ಎಂಬ ಬಗ್ಗೆ ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿ ಖಾತೆಯು 2013-14 ನೇ ವರ್ಷದವರೆಗೂ ಮುಂದುವರೆದಿರುತ್ತದೆ ಎಂಬುದನ್ನು ಒಪ್ಪಿರುತ್ತಾರೆ. ದಾವಾ ಆಸ್ತಿಯು 1979 ರ ಪಾಲು ವಿಭಾಗದಂತೆ ವಾದಿಯ ತಂದೆಯ ಹಿಸ್ಸೆಗೆ ಬಂದಿದ್ದು, ಅಂದಿನಿಂದಲೂ ಅವರೆ

ಸ್ವಾಧೀನದಲ್ಲಿದ್ದಾರೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ಈ ಮೇಲ್ಕಂಡ ಹೇಳಿಕೆಗಳನ್ನು ನಿಪಿ-3 ರಿಂದ 6 ಮತ್ತು ನಿಡಿ-10 ರಿಂದ 14 ರವರೆಗಿನ ದಾಖಲಾತಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ಎಸ್.ಆರ್. ಸಂಖ್ಯೆ-290/1979-80 ರ ಪ್ರಕಾರ ರಾಮಪ್ಪ ಬಿನ್ ಅಡಿವೆಪ್ಪರವರಿಂದ ಹುಚ್ಚಪ್ಪ ಬಿನ್ ಅಡಿವೆಪ್ಪರವರಿಗೆ ಖುಲಾಸೆ ಪತ್ರದಂತೆ ದಾವಾ ಸ್ವತ್ತಿನ ಕುರಿತು ಖಾತೆ ಏರ್ಪಟ್ಟಿರುವುದು ಕಂಡುಬರುತ್ತದೆ. ಈ ಕುರಿತು 1978-79 ರ ಪಹಣಿಯಲ್ಲಿಯೂ ಸಹ ಉಲ್ಲೇಖ ಇರುತ್ತದೆ. ನಿಪಿ-5 ಮತ್ತು 6 ರ ಪಹಣಿಗಳಂತೆ ವಾದಿಯ ತಾಯಿಯಾದ ಲಕ್ಕಮ್ಮರವರ ಹೆಸರಿಗೆ ಐ.ಹೆಚ್.ಸಿ. 943/1983-84 ರಂತೆ ಖಾತೆ ಏರ್ಪಟ್ಟಿದ್ದು, ಸ್ವಾಧೀನದಾರರು ಮತ್ತು ವ್ಯವಸಾಯಗಾರರು ಎಂಬಲ್ಲಿ 1991-92 ರಿಂದ 2014-15 ರವರೆಗೆ ವಾದಿಯ ತಾಯಿಯ ಹೆಸರು ಇರುವುದು ಕಂಡು ಬರುತ್ತದೆ. ಅಂತೆಯೆ ಎಂ.ಆರ್.42/1979-80 ರ ನಂತರದಲ್ಲಿ 1 ನೇ ಪ್ರತಿವಾದಿಯ ಪತಿ ಹಾಗೂ 5 ನೇ ಪ್ರತಿವಾದಿಯ ತಂದೆಯಾದ ರಾಮಪ್ಪ ಬಿನ್ ತಳವಾರ ಅಡಿವೆಪ್ಪ ರವರ ಹೆಸರಿನಲ್ಲಿ 10 ಎಕರೆ 30 ಗುಂಟೆ ಸ್ವತ್ತಿನ ಪೈಕಿ 8 ಎಕರೆ 10 ಗುಂಟೆ ಸ್ವತ್ತಿನ ಕುರಿತು ಮಾತ್ರ ಖಾತೆ ಏರ್ಪಟ್ಟಿದ್ದು, ವ್ಯವಸಾಯಗಾರರು ಮತ್ತು ಸ್ವಾಧೀನದಾರರು ಎಂಬಲ್ಲಿ 8 ಎಕರೆ 10 ಗುಂಟೆ ಸ್ವತ್ತಿನ ಕುರಿತು ಮಾತ್ರ ಉಲ್ಲೇಖ ಇರುತ್ತದೆ. ಹಾಗಾಗಿ ಡಿ.ಡಬ್ಲೂ-1 ರವರ ಹೇಳಿಕೆಯಂತೆ ದಾವೆಯನ್ನು ಸಲ್ಲಿಸುವ ಅವಧಿಯವರೆಗೂ ಸಹ ದಾವಾ ಸ್ವತ್ತಿನ ಖಾತೆಯು ವಾದಿಯ ಕುಟುಂಬದವರ ಹೆಸರಿನಲ್ಲಿ ಇತ್ತು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ಡಿ.ಡಬ್ಲೂ-1 ರವರ ಸಾಕ್ಷ್ಯದ ಕುರಿತು ನಿಪಿ-3 ರಿಂದ 6 ಮತ್ತು ನಿಡಿ-10 ರಿಂದ 14 ರವರೆಗಿನ ದಾಖಲಾತಿಗಳ ಉಲ್ಲೇಖದ ಕುರಿತು ವಾದಿಯ ಪರವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಡಿ.ಡಬ್ಲೂ-1 ರವರು ತನ್ನ ಮುಂದುವರೆದ ಪಾಟೀ ಸವಾಲಿನಲ್ಲಿ, 1979 ರಿಂದ 2014 ರವರೆಗೆ ದಾವಾ ಆಸ್ತಿಯ ಖಾತೆಯು ಹುಚ್ಚಪ್ಪ ಮತ್ತು ಆತನ ಪತ್ನಿಯಾದ ಲಕ್ಕಮ್ಮರವರ ಹೆಸರಿನಲ್ಲಿ ಇತ್ತು ಎಂಬುದರ ಕುರಿತು ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಮಾಲೀಕರ ಹೆಸರು ಕಂದಾಯ ದಾಖಲಾತಿಗಳಲ್ಲಿ ಬರುತ್ತದೆ ಎಂಬುದನ್ನು ಒಪ್ಪಿರುತ್ತಾರೆ. ನಿಪಿ-4 ರಲ್ಲಿ ಹುಚ್ಚಪ್ಪ ಬಿನ್

ಅಡಿವೆಪ್ಪ ಎಂದು ನಮೂದು ಇದೆ ಎಂಬುದನ್ನು ಮತ್ತು ನಿಪಿ-5 ಹಾಗೂ 6 ರಲ್ಲಿ ದಾವಾದ ಆಸ್ತಿ ವಾದಿಯ ತಾಯಿಯಾದ ಲಕ್ಕಮ್ಮರವರ ಹೆಸರಿನಲ್ಲಿ ಇದೆ ಎಂಬುದನ್ನು ಒಪ್ಪಿರುತ್ತಾರೆ. 2015-16 ರಲ್ಲಿ ತಮ್ಮ ತಂದೆಯ ಹೆಸರಿಗೆ ಖಾತೆ ಬದಲಾವಣೆ ಯಾಗಿರುವುದನ್ನು ಪ್ರಶ್ನಿಸಿ, ವಾದಿಯು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ದಾವಾದ ಆಸ್ತಿಯ ಚಕ್ಕುಬಂದಿ ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಅಂತಿಮವಾಗಿ ದಾವಾದ ಆಸ್ತಿಯು 1979 ರ ವಿಭಾಗದಂತೆ ವಾದಿಯ ತಂದೆಗೆ ಬಂದಿದ್ದು, ನಾವು ಅದರ ಸ್ವಾಧೀನಾನುಭವದಲ್ಲಿ ಇಲ್ಲ ಎಂಬುದನ್ನು ಒಪ್ಪಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ಸ್ಪಷ್ಟವಾಗಿ ಮತ್ತು ಉಭಯ ಪಕ್ಷಗಾರರು ಹಾಜರುಪಡಿಸಿ ರುವಂತಹ ದಾಖಲಾತಿಗಳ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ದಾವಾ ಸ್ವತ್ತಿನ ಖಾತೆಯು 1979 ರಿಂದ 2014-15 ರವರೆಗೆ ವಾದಿಯ ತಂದೆ ಹಾಗೂ ಆ ನಂತರದಲ್ಲಿ ವಾದಿಯ ತಾಯಿಯ ಹೆಸರಿನಲ್ಲಿ ನಮೂದು ಇರುವುದು ನಿಪಿ-3 ರಿಂದ 6 ಮತ್ತು ನಿಡಿ-10 ರಿಂದ 14 ರವರೆಗಿನ ದಾಖಲಾತಿಗಳಂತೆ ಸ್ಪಷ್ಟವಾಗಿ ಕಂಡುಬರುತ್ತದೆ. ಡಿ.ಡಬ್ಲೂ-1 ರವರ ಹೇಳಿಕೆಯಂತೆ ದಾವಾ ಸ್ವತ್ತು 1979 ರಲ್ಲಿ ವಾದಿಯ ತಂದೆಗೆ ವಿಭಾಗದ ಮೂಲಕ ಬಂದಿದ್ದು, ಅಂದಿನಿಂದಲೂ ಸಹ ಪ್ರತಿವಾದಿಯರು ದಾವಾ ಸ್ವತ್ತಿನ ಕುರಿತಾಗಿ ಸ್ವಾಧೀನಾನುಭವದಲ್ಲಿ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಡಿ.ಡಬ್ಲೂ-1 ರವರಿಗೆ ದಾವಾ ಸ್ವತ್ತಿನ ಕುರಿತಾದ ಚಕ್ಕುಬಂದಿಯು ಸಹ ಗೊತ್ತಿಲ್ಲ ಎಂಬುದು ಕಂಡುಬರುತ್ತದೆ. ಆದ್ದರಿಂದ 1979 ರಿಂದ ವಾದಿಯ ತಂದೆ, ಆ ನಂತರದಲ್ಲಿ ವಾದಿಯ ತಾಯಿ ಹಾಗೂ ವಾದಿ ದಾವಾ ಸ್ವತ್ತಿನ ಖಾತೆದಾರರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ ಎಂಬುದು ಸಂಭಾವ್ಯತೆಯ ಬಾಹುಳ್ಯತೆಯ ಆಧಾರದಲ್ಲಿ ರುಜುವಾತಾಗಿರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

21. ಈ ಮೇಲ್ಕಂಡ ವಿಚಾರಣಾ ನ್ಯಾಯಾಲಯದ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷವನ್ನು ಮತ್ತು ಕಾನೂನಿನ ಅಂಶಗಳನ್ನು ಕೂಲಂಕುಷ ವಾಗಿ ಪರಿಶೀಲಿಸಲಾಯಿತು. ವಾದಿಯು ವಿಚಾರಣಾ ನ್ಯಾಯಾಲಯದಲ್ಲಿ ದಾವಾ ಅನುಸೂಚಿತ ಸ್ವತ್ತಿನ ಘೋಷಣಾತ್ಮಕ ಪರಿಹಾರವನ್ನು ಮತ್ತು ಅದಕ್ಕೆ ಪೂರಕವಾಗಿ

ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿಯರು ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಆನಂತರದಲ್ಲಿ ವಿಚಾರಣಾ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸಿ, ಉಭಯ ಪಕ್ಷಗಾರರ ಸಾಕ್ಷ್ಯದ ಆಧಾರದಲ್ಲಿ ವಿವಾದಾಂಶ ಸಂಖ್ಯೆ-1 ಮತ್ತು 3 ರಿಂದ 6 ನ್ನು ನಕಾರಾತ್ಮಕವೆಂದು ಹಾಗೂ ವಿವಾದಾಂಶ ಸಂಖ್ಯೆ-2 ನ್ನು ಸಕರಾತ್ಮಕವೆಂದು ನಿರ್ಣಯಿಸಿ, ವಾದಿಯು ಸಲ್ಲಿಸಿರುವ ದಾವೆಯನ್ನು ವಜಾ ಮಾಡಿರುವುದು ಕಂಡುಬರುತ್ತದೆ. ವಾದಿಯು ತನ್ನ ವಾದಪತ್ರದಲ್ಲಿ, ದಾವಾ ಅನುಸೂಚಿತ ಸ್ವತ್ತು ಮೂಲತಃ ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ಅಡಿವೆಪ್ಪರವರಿಗೆ ಸೇರಿದ್ದು, ಸದರಿ ಸ್ವತ್ತನ್ನು ದಿನಾಂಕ 24.09.1979 ರಂದು ವಾದಿಯ ತಂದೆ ಮತ್ತು ಆತನ ಸಹೋದರನಾದ ರಾಮಪ್ಪ ರವರ ನಡುವೆ ಏರ್ಪಟ್ಟಂತಹ ನೋಂದಣಿ ವಿಭಾಗ ಪತ್ರದಂತೆ ಅರ್ಜಿಸಿದ್ದು, ಹಾಗಾಗಿ ವಾದಿಯು ದಾವಾ ಸ್ವತ್ತಿನ ಕುರಿತಾಗಿ ಮಾಲೀಕರಾಗಿ ಸ್ವಾಧೀನತೆಯನ್ನು ಹೊಂದಿರು ವುದಾಗಿ ಹೇಳಿರುತ್ತಾರೆ. ಈ ಕುರಿತು ಈಗಾಗಲೇ ಮೇಲ್ಕಂಡಂತೆ ನಿರ್ಣಯಿಸಲಾಗಿ, ವಾದಿಯ ತಂದೆ ಹುಚ್ಚಪ್ಪ ಬಿನ್ ಅಡಿವೆಪ್ಪರವರು ದಿನಾಂಕ 24.09.1979 ರ ನೋಂದಣಿ ಒಂದೇ ಪಾಲು ವಿಭಾಗ ಪತ್ರದಂತೆ ದಾವಾ ಸ್ವತ್ತಿನ ಕುರಿತಾಗಿ ಮಾಲೀಕತ್ವವನ್ನು ಅರ್ಜಿಸಿರುತ್ತಾರೆ ಎಂಬುದರ ಕುರಿತು ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದಾಗ್ಯೂ ಸದರಿ ದಾಖಲಾತಿಯ ಆಧಾರದಲ್ಲಿ ಏರ್ಪಟ್ಟಂತಹ ಕಂದಾಯ ದಾಖಲಾತಿಗಳು ಮತ್ತು ಡಿ.ಡಬ್ಲೂ-1 ರವರ ಪಾಟೀ ಸವಾಲಿನಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ವಾದಿಯ ತಂದೆಯಾದ ಹುಚ್ಚಪ್ಪ ಬಿನ್ ಅಡಿವೆಪ್ಪ ಹಾಗೂ ಸದರಿರವರ ಮರಣಾನಂತರದಲ್ಲಿ, ವಾದಿಯ ತಾಯಿಯಾದ ಲಕ್ಕಮ್ಮ ಕೋಂ ಹುಚ್ಚಪ್ಪರವರು ಮತ್ತು ವಾದಿ ದಾವಾ ಸ್ವತ್ತಿನ ಖಾತೆದಾರರಾಗಿ ಸ್ವಾಧೀನತೆಯನ್ನು ಹೊಂದಿದ್ದರು ಎಂಬುದು ಹಾಗೂ ದಾವೆಯನ್ನು ಸಲ್ಲಿಸುವ ಅವಧಿಯಲ್ಲಿ ವಾದಿಯ ಕುಟುಂಬದವರು ದಾವಾ ಸ್ವತ್ತಿನ ಕುರಿತಾಗಿ ಸ್ವಾಧೀನತೆಯನ್ನು ಹೊಂದಿದ್ದರು ಎಂಬುದು ಕಂಡುಬರುತ್ತದೆ. ಹಾಗಾಗಿ ಪ್ರತಿವಾದಿಯರು ದಾವಾ ಅನುಸೂಚಿತ ಸ್ವತ್ತಿನ ಖಾತೆಯನ್ನು ನಿಪಿ-11 ರ ಆಧಾರದಲ್ಲಿ

ಪ್ರತಿವಾದಿಯರ ತಂದೆಯ ಹೆಸರಿನಲ್ಲಿ ಹಾಗೂ ಆ ನಂತರದಲ್ಲಿ ನಿಡಿ-21 ರಿಂದ 25 ರ ದಾಖಲಾತಿಗಳಂತೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದು, ಆ ಮೂಲಕ ವಾದಿಯ ದಾವಾ ಸ್ವತ್ತಿನ ಸ್ವಾಧೀನತೆಗೆ ತಕರಾರು ಮಾಡಿರುವುದು ಕಂಡುಬರುತ್ತದೆ. ಅಂತೆಯೆ ದಾವಾ ಅನುಸೂಚಿತ ಸ್ವತ್ತು ಮೂಲತಃ ಅಡಿವೆಪ್ಪರವರಿಗೆ ಸೇರಿದ್ದು, ಸದರಿರವರ ಮಕ್ಕಳಾದ ವಾದಿಯ ತಂದೆಯಾದ ಹುಚ್ಚಪ್ಪ ಮತ್ತು 1 ನೇ ಪ್ರತಿವಾದಿಯ ಪತಿ ಹಾಗೂ ಇತರೆ ಪ್ರತಿವಾದಿಯರ ತಂದೆಯಾದ ರಾಮಪ್ಪರವರು ದಾವಾ ಅನುಸೂಚಿತ ಸ್ವತ್ತನ್ನು ದಿನಾಂಕ 24.06.1945 ರಂದು ರಾಮಪ್ಪರವರ ವಿವಾಹದ ಸಲುವಾಗಿ ಮಾರಾಟ ಮಾಡಿದ್ದು, ಆ ನಂತರದಲ್ಲಿ ಸದರಿ ಸ್ವತ್ತನ್ನು ರಾಮಪ್ಪರವರು ದಿನಾಂಕ 28.10.1954 ರಂದು ಕ್ರಯಕ್ಕೆ ಪಡೆದಿರುವುದು ಕಂಡುಬರುತ್ತದೆ. ಹಾಗಾಗಿ ಈ ಮೇಲ್ಕಂಡ ಅಂಶಗಳ ಕುರಿತಾಗಿ ಪ್ರತಿವಾದಿಯರ ನಿಲುವುಗಳ ಕುರಿತು ಪೂರ್ವಭಾವನೆಯನ್ನು ಮಾಡಲಾ ಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ವಿಚಾರಣಾ ನ್ಯಾಯಾಲಯವು ವಿವಾದಾಂಶ ಸಂಖ್ಯೆ-1 ರ ಕುರಿತಾಗಿ ನಕಾರಾತ್ಮಕವೆಂದು ಹಾಗೂ ವಿವಾದಾಂಶ ಸಂಖ್ಯೆ-2 ರ ಕುರಿತಾಗಿ ಸಕಾರಾತ್ಮಕವೆಂದು ನಿರ್ಣಯಿಸಿರುವಂತಹ ಕ್ರಮವು ಕಾನೂನಿನ ಅಂಶ ಗಳಿಂದ ಕೂಡಿರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಉಳಿದಂತೆ ವಿಚಾರಣಾ ನ್ಯಾಯಾಲಯವು ವಿವಾದಾಂಶ ಸಂಖ್ಯೆ-3, 4 ಮತ್ತು 6 ರ ಕುರಿತು ನಕಾರಾತ್ಮಕವೆಂದು ನಿರ್ಣಯಿಸಿರುವಂತಹ ಕ್ರಮವು ಉಭಯ ಪಕ್ಷಗಾರರು ಹಾಜರುಪಡಿಸಿರುವಂತಹ ದಾಖಲಾತಿಗಳ ಸಾಕ್ಷ್ಯ ಮತ್ತು ಪ್ರತಿವಾದಿಯರ ಪರ ಸಾಕ್ಷಿದಾರರಾದ ಡಿ.ಡಬ್ಲೂ-1 ರವರ ಮೌಖಿಕ ಸಾಕ್ಷ್ಯದಲ್ಲಿನ ಅಂಶಗಳಿಗೆ ಮತ್ತು ಕಾನೂನಿನ ಅಂಶಗಳಿಗೆ ವ್ಯತಿರಿಕ್ತ ವಾಗಿರುತ್ತದೆ. ಈ ಕುರಿತು ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ವಿವಾದಾಂಶ ಸಂಖ್ಯೆ-3, 4 ಮತ್ತು 6 ರ ಕುರಿತು ಕಾನೂನಿನ ಪ್ರಕ್ರಿಯೆಯ ಪ್ರಕಾರ ಪರಿಗಣಿಸದೆ ನಕಾರಾತ್ಮಕವೆಂದು ನಿರ್ಣಯಿಸಿರುವುದು ಲೋಪದೋಷಗಳಿಂದ ಕೂಡಿರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಉಳಿದಂತೆ ವಿವಾದಾಂಶ ಸಂಖ್ಯೆ-5 ರಂತೆ ವಾದಿಯು

ನ್ಯಾಯಾಲಯಕ್ಕೆ ಸೂಕ್ತವಾದ ಶುಲ್ಕವನ್ನು ಪಾವತಿಸಿಲ್ಲವೆಂದು ಪ್ರತಿವಾದಿಯರು ನಿಲುವನ್ನು ತೆಗೆದುಕೊಂಡಿದ್ದು, ಸದರಿ ವಿವಾದಾಂಶದ ಕುರಿತು ವಿಚಾರಣಾ ನ್ಯಾಯಾಲಯವು ನಕಾರಾತ್ಮಕವೆಂದು ನಿರ್ಣಯಿಸಿರುತ್ತದೆ. ವಿಚಾರಣಾ ನ್ಯಾಯಾಲಯದ ಈ ಮೇಲ್ಕಂಡ ವಿವಾದಾಂಶ ಸಂಖ್ಯೆ-5 ರ ನಿರ್ಣಯದ ಕುರಿತಾಗಿ ಪ್ರತಿವಾದಿಯರು ಯಾವುದೇ ಆಕ್ಷೇಪಣಾ ತಕರಾರನ್ನು ಸಲ್ಲಿಸಿರುವುದಿಲ್ಲ. ಅಂತೆಯೆ ವಿವಾದಾಂಶ ಸಂಖ್ಯೆ-5 ರ ಕುರಿತಾದ ವಿಚಾರಣಾ ನ್ಯಾಯಾಲಯದ ನಿರ್ಣಯವು ಕಾನೂನಾತ್ಮಕ ಅಂಶಗಳಿಂದ ಕೂಡಿರುತ್ತದೆ ಎಂಬುದು ಕಂಡುಬರುತ್ತದೆ. ಹಾಗಾಗಿ ವಿಚಾರಣಾ ನ್ಯಾಯಾಲಯದ ವಿವಾದಾಂಶ ಸಂಖ್ಯೆ-5 ರ ಕುರಿತಾದ ನಿರ್ಣಯವು ಕಾನೂನಿನ ಅಂಶಗಳಿಗೆ ಪೂರಕವಾಗಿದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿ ಕಾನೂನಿನ ಅಂಶಗಳನ್ನು ಅರ್ಥೈಸುವಲ್ಲಿ ಮತ್ತು ವಾದಿಯು ಕೋರಿರುವಂತಹ ಪರಿಹಾರದ ಕುರಿತು ನಿರ್ಣಯಿಸುವಲ್ಲಿ ಲೋಪ-ದೋಷಗಳಿಂದ ಕೂಡಿದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ವಿಚಾರಣಾ ನ್ಯಾಯಾಲಯವು ವಿವಾದಾಂಶ ಸಂಖ್ಯೆ-3, 4 ಮತ್ತು 6 ರ ಕುರಿತಾಗಿ ನಕಾರಾತ್ಮಕವೆಂದು ನಿರ್ಣಯಿಸಿರುವಂತಹ ಕ್ರಮವು ಕಾನೂನಿನ ದೋಷಗಳಿಂದ ಕೂಡಿರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಾಗಿ ವಾದಿಯು ದಾವೆಯಲ್ಲಿ ಕೋರಿರುವಂತಹ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಮೇಲ್ಮನವಿದಾರರು ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸುವಂತಹ ಅಂಶಗಳನ್ನು ರುಜುವಾತುಪಡಿಸಿರುತ್ತಾರೆಂದು ನಿರ್ಣಯಿಸಲಾಗಿದೆ. ಹಾಗಾಗಿ ಈ ಮೇಲ್ಕಂಡ ಅಂಶ ಸಂಖ್ಯೆ-1 ನ್ನು ನಕಾರಾತ್ಮಕ ವೆಂದು, ಅಂಶ ಸಂಖ್ಯೆ-2 ರಿಂದ 4 ನ್ನು ಸಕಾರಾತ್ಮಕವೆಂದು ಮತ್ತು ಅಂಶ ಸಂಖೆ-5 ಮತ್ತು 6 ನ್ನು ಭಾಗಶಃ ಸಕಾರಾತ್ಮಕವೆಂದು ನಿರ್ಣಯಿಸಲಾಗಿದೆ.

**22. <u>ಅಂಶ ಸಂಖ್ಯೆ-7:-</u>** ಈ ಮೇಲ್ಕಂಡಂತೆ ಅಂಶ ಸಂಖ್ಯೆ-1 ರಿಂದ 6 ನ್ನು ನಿರ್ಣಯಿಸಲಾಗಿ, ಈ ಕೆಳಕಂಡಂತೆ ಆದೇಶಿಸಲಾಗುತ್ತದೆಃ-

## ಆದೇಶ

ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-137/2015 ರ ದಿನಾಂಕ 01.10.2021 ರ ತೀರ್ಪು ಮತ್ತು ಡಿಕ್ರಿಯ ವಿರುದ್ದ ಮೇಲ್ಮನವಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 1 ಸಹವಾಚಕ ಕಲಂ 96 ರ ಅಡಿಯಲ್ಲಿ ಸಲ್ಲಿಸಿದಂತಹ ಮೇಲ್ಮನವಿಯನ್ನು ಖರ್ಚು ಸಹಿತ ಭಾಗಶಃ ಪುರಸ್ಕರಿಸಲಾಗಿದೆ.

ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-137/2015 ರ ದಿನಾಂಕ 01.10.2021 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲಾಗಿದೆ.

ಹೊಳಲ್ಕೆರೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಸಲು ದಾವಾ ಸಂಖ್ಯೆ-137/2015 ನ್ನು ಭಾಗಶಃ ಡಿಕ್ರಿ ಮಾಡಲಾಗಿದೆ.

ವಾದಿಯು ಸಲ್ಲಿಸಿರುವ ದಾವೆಯನ್ನು ಭಾಗಶಃ ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.

ವಾದಿಯು ಸಲ್ಲಿಸಿರುವ ದಾವೆಯನ್ನು ಘೋಷಣಾತ್ಮಕ ಪರಿಹಾರಕ್ಕೆ ಸಂಬಂಧಿಸಿದಂತೆ ವಜಾ ಮಾಡಲಾಗಿದೆ.

ಪ್ರತಿವಾದಿಯರಾಗಲೀ, ಅವರ ಕುಟುಂಬದ ಸದಸ್ಯರಾಗಲೀ ಅಥವಾ ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರಾಗಲೀ, ಪ್ರತಿವಾದಿಯರ ಬೆಂಬಲಿಗರಾಗಲೀ ಅಥವಾ ಯಾವುದೇ ವ್ಯಕ್ತಿಗಳಾಗಲೀ ಅತಿಕ್ರಮ ಪ್ರವೇಶ ಉಂಟು ಮಾಡಿ ದಾವಾ ಅನುಸೂಚಿತ ಸ್ವತ್ತಿಗೆ ಅಡ್ಡಿ, ಆತಂಕ, ಕಿರುಕುಳ ನೀಡದಂತೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲಾಗಿರುತ್ತದೆ.

ಈ ಮೇಲ್ಕಂಡಂತೆ ಡಿಕ್ರಿ ಮಾಡತಕ್ಕದ್ದು.

ವಿಚಾರಣಾ ನ್ಯಾಯಾಲಯದ ಕಡತದೊಂದಿಗೆ ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 23ನೇ ಮಾರ್ಚ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.